ಕಂಪನಿಮನೆ ಶಿಲ್ಪಿಗಳು



ಪ್ರಭಾಕರ ಎಆರ್‌ಎಸ್.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕಂಪನಿಮನೆ ಶಿಲ್ಪಿಗಳು

ಲೇಖನ ಮತ್ತು ಸಂಪಾದಕರು
ಪ್ರಭಾಕರ ಎಆರ್ಎಸ್

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002
ದೂರವಾಣಿ: 080- 22278725, Email: shilpakala.academy@gmail.com
Web: www.karnatakashilpakalaacademy.org

COMPANIMANE SHILPIGALU
Book written on group of traditional Sculpture artists by Mr. Prabhakara, ARS

Published by :
R. Chandrashekara,
Registrar, Karnataka Shilpakala Academy,
Kannada Bhavana, J.C. Road,
Bangalore 560 002

ISBN : 978-819429041-4

ಕಂಪನಿಮನೆ ಶಿಲ್ಪಿಗಳು
ಲೇಖಕರು : ಪ್ರಭಾಕರ ಎಆರ್‌ಎಸ್

ಪ್ರಕಾಶಕರು:

ಆರ್. ಚಂದ್ರಶೇಖರ
ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560 002

ಮೊದಲ ಮುದ್ರಣ : 2019

ಪುಟಗಳು:	40 + 48 = 88
ಆಕಾರ:	1/8 ಡೆಮಿ
ಕಾಗದ:	70 ಜಿ.ಎಸ್.ಎಂ. ಮ್ಯಾಪ್ಲಿಥೋ
ವರ್ಣಚಿತ್ರ:	100 ಜಿ.ಎಸ್.ಎಂ. ಆರ್ಟ್
ಪ್ರತಿಗಳು:	500

ಬೆಲೆ: ರೂ. 100/-

ಪುಟ ವಿನ್ಯಾಸ : ಬಿ.ಎಸ್. ವಿದ್ಯಾರಣ್ಯ

ಮುದ್ರಣ: ಚಾರುಮತಿ ಪ್ರಕಾಶನ, ಬೆಂಗಳೂರು
94482 35553



ಮುನ್ನುಡಿ

ಶಿಲ್ಪಕಲೆಯಲ್ಲಿ ವಿಶ್ವಮಾನ್ಯತೆ ಪಡೆದ ನಾಡು ನಮ್ಮ ಕರ್ನಾಟಕ. ಸಾವಿರಾರು ವರ್ಷಗಳಿಂದ ಲೋಹ, ದಾರು (ಮರ), ಶಿಲಾ ಶಿಲ್ಪಕಲಾಕೃತಿಗಳ. ದೇವಾಲಯ, ದೇವತಾಮೂರ್ತಿಗಳು, ಮರದ, ಶಿಲೆಯ ಧ್ವಜಸ್ಥಂಭಗಳ ಹಾಗೂ ಸರ್ವರಿಗೂ ಗುಡಿ ಗೋಪುರಗಳನ್ನು ನಿರ್ಮಿಸಿಕೊಟ್ಟವರು ನಮ್ಮ ಶಿಲ್ಪಿಗಳು. ಅದರಲ್ಲಿ ಲೋಹ ಶಿಲ್ಪದಲ್ಲಿ ವಿಶ್ವಮಾನ್ಯತೆ ಪಡೆದವರು ನಮ್ಮ ನಾಗಮಂಗಲದ ಶಿಲ್ಪಿ ಶ್ರೇಷ್ಠರು.

ಭಾರತದಲ್ಲಿ ಶಿಲ್ಪ ಸಂಸ್ಕೃತಿ(ಭಾರತೀಯ)ಯನ್ನು ಬಿಂಬಿಸುವ ಸಾವಿರಾರು ಗುಡಿ–ಗೋಪುರಗಳು, ಸ್ಮಾರಕಗಳಿವೆ. ಇವುಗಳ ಇತಿಹಾಸ ನಮಗೆ ಲಭ್ಯವಿದೆ. ಆದರೆ ಅದನ್ನು ಕೆತ್ತಿದ ಶಿಲ್ಪಿಗಳ ಹೆಸರು ನಮಗೆ ತಿಳಿದಿಲ್ಲ. ಬಾಹುಬಲಿ ಗೊತ್ತು ಆತನ ಬೃಹತ್ ವಿಗ್ರಹ ಕೆತ್ತಿಸಿದ ಚಾವುಂಡರಾಯನ ಹೆಸರೂ ನಮಗೆ ಗೊತ್ತು. ಆದರೆ ಅದನ್ನು ಕೆತ್ತಿದ ಶಿಲ್ಪಿ ಯಾರು ಎಂಬುದು ತಿಳಿದಿಲ್ಲ. ಹಳೇಬೀಡಿನ ಚೆಲುವು ಕಂಡು ಸಂಭ್ರಮಿಸುವ ನಾವು ಅದರ ಶಿಲ್ಪಿಗಳ ಬಗ್ಗೆ ಚಿಂತನೆ ಮಾಡುವುದಿಲ್ಲ. ಆದರೆ ಶಿಲ್ಪಿಗಳಿಗೂ ಒತ್ತು ನೀಡುವ ಇತಿಹಾಸ ಬರೆಯಬೇಕಿದೆ ಎಂದು ಡಾ. ಷ. ಶೆಟ್ಟರ್ ಕೃತಿ ರೂವಾರಿ (ಕನ್ನಡ ನಾಡಿನ ವಾಸ್ತುಶಿಲ್ಪಿಗಳ ಚಾರಿತ್ರಿಕ ಹಿನ್ನಲೆಯುಳ್ಳ) ಗ್ರಂಥದಲ್ಲಿ ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಶಿಲ್ಪಿಗಳ ಕುರಿತಾಗಿ ಹತ್ತಾರು ಕಿರುಗ್ರಂಥಗಳನ್ನು ಈವರೆಗೂ ಪ್ರಕಟಿಸಲಾಗಿದೆ. ಇನ್ನೂ ಹಲವಾರು ಉತ್ತಮ ಶಿಲ್ಪಿಗಳ ಕುರಿತ ಕೃತಿಗಳು

ಪ್ರಕಟವಾಗಬೇಕಿದೆ. ಈಗಿನ ಮತ್ತು ಮುಂದಿನ ಉತ್ತಮ ಕೃತಿ ರಚಿಸುವ ಶಿಲ್ಪಿಗಳು ಮೂರ್ತಿ ಕೆಳ ಬಲಭಾಗದಲ್ಲಿ ಒಂದು ಕಡೆ ಚಿಕ್ಕದಾಗಿ ಅವರ ಹೆಸರನ್ನೂ ಕೆತ್ತುವುದು ಅವಶ್ಯ ಮತ್ತು ಅನಿವಾರ್ಯ ಎಂದು ನಾನು ಭಾವಿಸುತ್ತೇನೆ.

ಪ್ರಸ್ತುತ **ಕಂಪನಿಮನೆ ಶಿಲ್ಪಿಗಳು** ಕಿರು ಗ್ರಂಥವನ್ನು ಸಂಪಾದನೆ ಮಾಡಿರುವ ಲೇಖಕ ಶ್ರೀ ಪ್ರಭಾಕರ್ ARS, ಕೇಂದ್ರ ಸರ್ಕಾರದ Indian Council of Agricultural Research ಸಂಸ್ಥೆಯಲ್ಲಿ ಪ್ರಧಾನ ವಿಜ್ಞಾನಿಯಾಗಿ ಕೆಲಸ ನಿರ್ವಹಿಸಿ ನಿವೃತ್ತಿ ಹೊಂದಿರುತ್ತಾರೆ. ಇವರೂ ಸಹ ಕಂಪನಿಮನೆ ವಂಶಸ್ಥರೇ. ಗ್ರಂಥದಲ್ಲಿ ಶಿಲ್ಪಿಗಳ ಪರಿಚಯದೊಂದಿಗೆ ಅವರು ನಿರ್ಮಿಸಿರುವ ಶಿಲ್ಪಗಳ ಛಾಯಾಚಿತ್ರಗಳನ್ನು ಪ್ರಕಟಿಸಿದ್ದು ಓದುಗರ ಕಣ್ಮನ ಸೆಳೆಯುವಂತಿದೆ.

ಈ ಶಿಲ್ಪಿಗಳು ಪಂಚಲೋಹ, ತಾಮ್ರ, ಬೆಳ್ಳಿ, ಚಿನ್ನ, ಶ್ರೇಷ್ಠ ಲೋಹಗಳಲ್ಲಿ ನಿರ್ಮಿಸಿರುವ ಶಿಲ್ಪಕಲಾಕೃತಿಗಳು ದೇಶ–ವಿದೇಶಗಳಲ್ಲಿಯೂ ಪ್ರದರ್ಶಿಸಲ್ಪಟ್ಟಿರುವುದು ಅಖಂಡ ವಿಶ್ವಕರ್ಮ ಸಮಾಜಕಷ್ಟೇ ಅಲ್ಲ ನಾಡಿಗೇ ಹೆಮ್ಮೆಯ ವಿಷಯ. ಅಂದಿನ ಕಾಲಕ್ಕೆ ಶಿಲ್ಪಿಗಳು ಕಂಪನಿಮನೆ ಶಿಲ್ಪಿಗಳು ಎಷ್ಟು ಪ್ರಖ್ಯಾತರಾಗಿದ್ದರೆಂದರೆ ಇವರ ಕುರಿತಾಗಿ ಬರೆದ ಲೇಖನಗಳು ದೇಶ – ವಿದೇಶದ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವುದು ಸಾಕ್ಷಿ.

ಈ ಗ್ರಂಥದಲ್ಲಿರುವ ಮಾಹಿತಿಯು ಶಿಲ್ಪಕಲಾ ಅಭ್ಯಾಸಿಗಳಿಗೂ ಶಿಲ್ಪಕಲಾ ಆಸಕ್ತಿಗೂ ಶಿಲ್ಪಕಲೆಯ ಬಗ್ಗೆ ಪ್ರೇರಣೆ ನೀಡಲಿ, ಗ್ರಂಥಕರ್ತರು ಶಿಲ್ಪಿಗಳ ಕುರಿತಾಗಿ ಮುಂದೆಯೂ ಗ್ರಂಥಗಳನ್ನು ರಚಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಪುಸ್ತಕ ಮುದ್ರಣ ಮಾಡಲು ಸಹಕರಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಆರ್. ಚಂದ್ರಶೇಖರ್ ಅವರಿಗೂ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ಸಿಬ್ಬಂದಿಗಳಿಗೂ, ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲೀಕರು, ಚಾರುಮತಿ ಪ್ರಕಾಶನ, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

– ಶಿಲ್ಪಿ ರು. ಕಾಳಾಚಾರ್
ಅಧ್ಯಕ್ಷರು,
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಅಭಿನಂದನೆಗಳು



ಶ್ರೀ ಧರ್ಮಸ್ಥಳ–574 216
ದಕ್ಷಿಣ ಕನ್ನಡ, ಕರ್ನಾಟಕ

ಪ್ರಭಾಕರರಿಗೆ,

ನಿಮ್ಮ ಪತ್ರ ತಲುಪಿ ವಿಚಾರ ಅಭಿಪ್ರಾಯವಾಯಿತು.


ನೀವು ಆದರಪೂರ್ವಕವಾಗಿ ಕಳುಹಿಸಿದ 'ಕಂಪನಿಮನೆ ಶಿಲ್ಪಿಗಳು' ಪುಸ್ತಕ ತಲುಪಿ ಸಂತೋಷವಾಯಿತು. ನೀವು ಬರೆದಂತೆ ಶಿಲ್ಪಿಗಳು ಅನೇಕ ರೀತಿಯ ಶಿಲ್ಪಶಾಸ್ತ್ರವನ್ನು ಬಳಸಿಕೊಂಡು ಕಲಾಕೃತಿಗಳನ್ನು ರೂಪಿಸುತ್ತಿದ್ದರು. ಕಲಾವಿದರ ಮನೋಧರ್ಮಕ್ಕೆ ಅನುಗುಣವಾಗಿ ಕಲೆ ಇದ್ದರೂ, ಮೈಸೂರಿನ ಶೈಲಿ ಪಾರಂಪರಿಕ ಕಲೆಯಾಗಿ ಉತ್ತಮವಾಗಿ ಮೂಡಿ ಬಂದಿದೆ. ವಿಶೇಷವಾಗಿ ದೇವತಾಮೂರ್ತಿಗಳು ಪ್ರತಿಷ್ಠೆಯಾದ ಮೇಲೆ ತಮ್ಮನ್ನು ನಂಬುವ ಭಕ್ತರನ್ನು ವಿಶೇಷವಾಗಿ ಅನುಗ್ರಹಿಸುತ್ತಾ ಬಂದಿರುವುದರಿಂದ ಶಿಲ್ಪಕಲೆಯ ಮೂರ್ತಿಶಿಲ್ಪಕ್ಕೂ ಬಹಳ ವಿಶೇಷವಾಗಿ ಗೌರವವಿದೆ.

'ಕಂಪನಿಮನೆ ಶಿಲ್ಪಿಗಳು' ಪುಸ್ತಕ ಉಪಯುಕ್ತ ಮಾಹಿತಿಯೊಂದಿಗೆ ಉತ್ತಮವಾಗಿ ಮೂಡಿ ಬಂದಿದೆ. ಅಭಿನಂದನೆಗಳು.

ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

ಇತಿ

(ಡಿ. ವೀರೇಂದ್ರ ಹೆಗ್ಗಡೆಯವರು)



ಕಲೆಗೆ ಶಿಖರಪ್ರಾಯವಾದ ಮನೆತನಗಳು

ಇಡೀ ಭಾರತದಲ್ಲಿ ಮೈಸೂರು ರಾಜ್ಯದ ಮಹಾರಾಜರ ಕೊಡುಗೆಗಳು ಬಹು ವಿಶಿಷ್ಟವಾದವು ಹಾಗೂ ವಿಶ್ವದಲ್ಲೇ ಮಾನ್ಯತೆ ಪಡೆದಿರುವಂತಹ ಹಲವಾರು ಹೆಗ್ಗುರುತುಗಳನ್ನು ನಾವು ಕಳೆದ ಎರಡು ಶತಮಾನಗಳಿಂದ ಗುರುತಿಸಬಹುದು.

ಅವುಗಳಲ್ಲಿ ಪ್ರಮುಖವಾದವು ಸಂಗೀತ, ಸಾಹಿತ್ಯ ಮತ್ತು ಶಿಲ್ಪಕಲೆ. ಅದರಲ್ಲಿಯೂ ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತವೂ ನಮ್ಮ ಮಹಾರಾಜರುಗಳ ಪ್ರೋತ್ಸಾಹದಿಂದ ಅತೀ ಎತ್ತರಕ್ಕೆ ಬೆಳೆದಿರುವುದನ್ನು ನಾವು ಕಂಡಿದ್ದೇವೆ.

ಸನ್ಮಾನ್ಯ ಶ್ರೀ ವೀಣಾ ಶೇಷಣ್ಣ ಅವರ ಪಾಂಡಿತ್ಯ, ಸಂಗೀತ ಮತ್ತು ಭಕ್ತಿ ಬಹಳ ವಿಶೇಷವಾದದ್ದು. ಇವರನ್ನು ದೇವ ಮಾನವರು ಎಂದು ಮಹಾ ಪಂಡಿತರು ಗುರುತಿಸಿರುತ್ತಾರೆ. ಹಾಗೆಯೇ ಬಿಡಾರಂ ಕೃಷ್ಣಪ್ಪನವರು, ಟಿ. ಚೌಡಯ್ಯನವರು ಪಿಟೀಲು ವಾದ್ಯದಲ್ಲಿಯೇ ಅತೀ ಎತ್ತರಕ್ಕೆ ಬೆಳೆದಂತವರು.


ಶಿಲ್ಪಕಲೆಯಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕೆಲವು ಮಹಾ ಪಂಡಿತರು ಅತೀ ಎತ್ತರಕ್ಕೆ ತಮ್ಮ ಪ್ರಾವೀಣ್ಯತೆ ಪಡೆದು, ವಿಶ್ವದಲ್ಲಿಯೇ ಇವರ ಕಲೆ ಪ್ರಸಿದ್ಧವಾಗಿವೆ. ಬಹಳಷ್ಟು ಪಂಚಲೋಹ ವಿಗ್ರಹಗಳನ್ನು ಅತೀ ಸುಂದರವಾಗಿ ಕೊಟ್ಟಿರುವಂತಹ ಕೊಡುಗೆಗಳು ನೂರಾರು. ಅದರಲ್ಲಿಯೂ ಚೆನ್ನೈ ಹಾಗೂ ಹೊರ ರಾಷ್ಟ್ರಗಳಲ್ಲಿ ಬೆಲೆ ಕಟ್ಟಲಾಗದ ಸೌಂದರ್ಯದ ವಿಗ್ರಹಗಳನ್ನು ಸೃಷ್ಟಿ ಮಾಡಿ ಮೆಚ್ಚುಗೆ ಪಡೆದಿರುವ ವಂಶಸ್ಥರುಗಳು ಈ

ಪ್ರದೇಶದಲ್ಲಿ ಬದುಕಿ ಬಾಳಿ ವಿಶ್ವಖ್ಯಾತಿಯನ್ನು ಪಡೆದಿರುತ್ತಾರೆ.

ಇವರ ವಂಶಸ್ಥರಾದಂತಹ ಶ್ರೀ ಪ್ರಭಾಕರ್ ಅವರು ಅವರ 80 ರ ಪ್ರಾಯದಲ್ಲಿ ಅವರ ಹಿರಿಯರ ಕೊಡುಗೆಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿರುತ್ತಾರೆ. ಇದು ಈಗಿನ ಜನಾಂಗಕ್ಕೆ ಅತೀ ಮುಖ್ಯವಾಗಿ ಬೇಕಾಗಿರುವ ಕೊಡುಗೆ. ಇಲ್ಲಿನ ಶಿಲ್ಪಿಗಳು ತಮ್ಮ ಕಲೆ ಮತ್ತು ವಿಜ್ಞಾನ(ಕಲಾಭಿವ್ಯಕ್ತಿಗೆ ಬೇಕಾದ ವಸ್ತುಜ್ಞಾನ, ನಿರ್ಮಾಣಜ್ಞಾನ)ಗಳನ್ನು ಮಿಳಿತಗೊಳಿಸಿ ಲಕ್ಷ್ಮಿ, ಸರಸ್ವತಿ, ನಟರಾಜ ಮುಂತಾದ ದೈವಿಕ ಪ್ರತಿಮೆಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಈ ವಿಗ್ರಹಗಳು ತಮ್ಮ ಮುಖದ ಮಂದಹಾಸ ಮತ್ತು ಕಣ್ಣುಗಳಲ್ಲಿನ ಭಾವನೆಗಳ ಮೂಲಕ ಭಕ್ತಾದಿಗಳಿಗೆ ಸಾವಿರಾರು ಕಥೆಗಳನ್ನು ಹೇಳುತ್ತವೆ. ತಮ್ಮ ಪೂರ್ವಿಕರ ರಚನೆಯಲ್ಲಿ ಅಡಕವಾಗಿರುವ ಸೌಂದರ್ಯ ಮತ್ತು ಪ್ರೀತಿಯನ್ನು ನೋಡುಗರು ತಕ್ಷಣ ಗ್ರಹಿಸಬಹುದಾಗಿದೆ.

ಪ್ರಭಾಕರ್ ಅವರ ರಚನೆಯ ಪುಸ್ತಕವು ಮಹಾಶಿಲ್ಪಿಗಳ ಕೊಡುಗೆಗಳನ್ನು ಬಹಳ ಚೆನ್ನಾಗಿ ನಿರೂಪಿಸಿದೆ. ಅವರಿಗೆ ಅಭಿನಂದನೆಗಳು.

– ಡಾ. ಯಲ್ಲಪ್ಪ ರೆಡ್ಡಿ
ಖ್ಯಾತ ಪರಿಸರ ವಿಜ್ಞಾನಿಗಳು



ಶುಭ – ಸಂದೇಶ

ಭಾರತೀಯ ಸಂಸ್ಕೃತಿಗೆ ವೈಶ್ವಕರ್ಮಣ ಶಿಲ್ಪಿಗಳು ನಿಡಿದ ಕೊಡುಗೆ ಅಪಾರ. ವೈದಿಕ ವಾಙ್ಮಯದಿಂದ ಹಿಡಿದು, ಹರಪ್ಪಾ ಮೊಹಂರ್ಝೋದಾರೋ, ಅಜಂತಾ–ಎಲ್ಲೋರ ಗುಹಾಂತರ ದೇವಾಲಯಗಳು, ಪುರಿ – ಭುವನೇಶ್ವರ – ಕೋನಾರ್ಕ ದೇವಾಲಯಗಳಲ್ಲದೇ ದಕ್ಷಿಣದ ಅದ್ಭುತಕುಸರಿ ಕಲೆಗಳಗ ದೇವಾಲಯಗಳು, ಬದಾಮಿ, ಐಹೊಳೆ, ಪಟ್ಟದಕಲ್ಲು ಮತ್ತು ಬೇಲೂರು, ಹಳೇಬೀಡು ಹೀಗೆ ವೈಶ್ವಕರ್ಮಣ ಶಿಲ್ಪಿಗಳ ಶಿಲ್ಪ ಪ್ರಯೋಗಗಳು ವೈವಿಧ್ಯಮಯವಾಗಿವೆ. ಚಿನ್ನ, ಬೆಳ್ಳಿ, ಪಂಚಲೋಹ, ಕಲ್ಲು, ಮರದ ಕೆತ್ತನೆಯ ಶಿಲ್ಪಕಾರ್ಯಗಳು ಜಗದ ಜನರ ಮನಸೂರೆಗೊಂಡಿವೆ.

ಇಂತಹ ಕಲಾ ಪ್ರಪಂಚ ಬದುಕು ಸಾಗಿಸಿದ ವೈಶ್ರವಕರ್ಮಣ ಶಿಲ್ಪಿಗಳ ಕುಟುಂಬಗಳು ಇಂದಿಗೂ ಪರಂಪರೆಯಿಂದ ಬಂದ ಶಿಲ್ಪಕಾರ್‍ಯಗಳನ್ನು ಮಾಡುತ್ತಾ ಬಂದಿದ್ದಾರೆ. ಕೊನಾರ್ಕದ ಸೂರ್ಯ ದೇವಾಲಯದ (1230) ಸ್ಥಪತಿ ವಿಶು ಮೊಹರಾಣಾರಿಂದ ಇಂದಿನ ಪ್ರದ್ಮಶ್ರೀ ಪ್ರಭಾಕರ ಮೊಹರಾಣ ಮತ್ತು ಪದ್ಮಶ್ರೀ, ಪದ್ಮಭೂಷಣ ಡಾ. ರಘುನಾಥ ಮಹಾಪಾತ್ರವರೆಗೂ ನಿರಂತರವಾಗಿ ಓರಿಸ್ಸಾದಲ್ಲಿ ನಡೆದುಕೊಂಡು ಬಂದಿದೆ.

ಕರ್ನಾಟಕದ ಅಪ್ಪಟ ಕನ್ನಡ ಶಿಲ್ಪವೈಭವದ ಅಮರ ಶಿಲ್ಪಿ ಜಕ್ಕಣಾಚಾರ್ಯರ (1117–1180) ಹೊಯ್ಸಳ ಶಿಲ್ಪ ಪರಂಪರೆ ಮತ್ತು ಶಿವಾರಪಟ್ಟಣದ ಶಿಲಾಶಿಲ್ಪಿಗಳು ಇಂದಿಗೂ ಶಿಲ್ಪ ಪರಂಪರೆಯನ್ನು ನಡೆಸಿಕೊಂಡು ಬಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಪಂಚಲೋಹದ ದೇವತಾ ಉತ್ಸವಮೂರ್ತಿಗಳು, ಪೂಜಾ ವಸ್ತುಗಳು ಮತ್ತು ಗೃಹಬಳಕೆ ವಸ್ತುಗಳನ್ನು ಪರಂಪರೆಯಿಂದ ನಡೆಸಿಕೊಂಡು ಬಂದವರು ನಾಗಮಂಗಲದ ಪಂಚಲೋಹದ ವೈಶ್ವಕರ್ಮಣ ಶಿಲ್ಪಿಗಳು. ನಾಗಮಂಗಲದ ಈ ಶಿಲ್ಪಿಗಳು ಮಾಡಿದ ಪಂಚಲೋಹದ ಉತ್ಸವಮೂರ್ತಿಗಳು ನಾಡಿನಾದ್ಯಂತ ಪೂಜೆಗೊಳ್ಳುತ್ತಿವೆ. ನಾಗಮಂಗಲದ ಈ ಶಿಲ್ಪಿಗಳ ಕೊಡುಗೆಯನ್ನು ಸ್ಮರಿಸುವ ನಿಟ್ಟಿನಲ್ಲಿ ಶ್ರೀ ಪ್ರಭಾಕರರವರು 'ಕಂಪನಿಮನೆ ಶಿಲ್ಪಿಗಳು' ಎಂಬ ಸುಂದರ ಪುಸ್ತಕವೊಂದನ್ನು ಹೊರತಂದಿದ್ದಾರೆ. ತಮ್ಮ ಇಳಿವಯಸ್ಸಿನಲ್ಲೂ ತಮ್ಮ ಹಿರಿಯರ ನೆನಪು ಉಳಿಸುವಂತಹ ಕಾರ್ಯ ಮಾಡಿದ ಶ್ರೀ ಪ್ರಭಾಕರರಿಗೆ ಅಭಿನಂದನೆಗಳು. ನಾಡಿನ ಕಲಾಭಿಮಾನಿಗಳು ಈ ಗ್ರಂಥವನ್ನು ಸಹೃದಯದಿಂದ ಸ್ವೀಕರಿಸಬೇಕಾಗಿ ತಿಳಿಸುತ್ತಾ ಗ್ರಂಥಕರ್ತರಿಗೆ ಶುಭ ಕೋರುತ್ತೇವೆ.

ಭಗವತ್ಸೇವೆಯಲ್ಲಿ
ಸ್ವಾಮಿ ಶಿವಾತ್ಮಾನಂದ ಸರಸ್ವತೀ

ಮುಖಪುಟ ಚಿತ್ರದ ಬಗ್ಗೆ

ಆಶ್ವಯುಜ ಶುದ್ಧ ಪಾಡ್ಯಮಿಯಿಂದ ದಶಮಿಯವರೆಗಿನ ಒಂಬತ್ತು ಹತ್ತು ದಿನಗಳು ಬಹು ಪ್ರಶಸ್ತಿತವಾದವುಗಳು. ಮೊದಲ ಒಂಬತ್ತು ದಿನಗಳನ್ನು ನವರಾತ್ರಿಯೆಂದೂ ಹತ್ತನೆಯ ದಿನವನ್ನು ವಿಜಯದಶಮಿಯೆಂದೂ ಕರೆಯುವುದುಂಟು. ಶಕ್ತಿ ದುರ್ಗಾದೇವಿಯ ಪೂಜೆಯನ್ನು ಶತಮಾನಗಳ ಹಿಂದಿನಿಂದಲೂ ವಿವಿಧ ರೀತಿಯಲ್ಲಿ ನಮ್ಮ ದೇಶದಲ್ಲಿ ಆರಾಧಿಸುತ್ತಾ ಬಂದಿದ್ದೇವೆ.

ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರ ದೇವರುಗಳನ್ನು ಸರ್ವಥಾ ಪೀಡಿಸುತ್ತಿದ್ದ ಮಹಿಷಾಸುರನ ದೈತ್ಯ ಕೃತ್ಯಗಳನ್ನು ಸಹಿಸಲಾಗದೆ ತಾಳ್ಮೆಯನ್ನು ಕಳೆದುಕೊಂಡ ತ್ರಿಮೂರ್ತಿಗಳು ತಮ್ಮಗಳ ಶಕ್ತಿ ಮತ್ತು ಆಯುಧಗಳಿಂದ ದುರ್ಗಾದೇವಿಯು ನವರಾತ್ರಿಯ (ನವಮಿ) ದಿನ ಉದ್ಭವಿಸುತ್ತಾಳೆ. ಚಿತ್ರದಲ್ಲಿ ಚಾಮುಂಡಿ (ದುರ್ಗಾದೇವಿ)ಯು ತನ್ನ ನಾಲ್ಕು ಬಲ ಕೈಗಳಲ್ಲಿ ಚಕ್ರ, ಖಡ್ಗ, ಬಾಣ, ತ್ರಿಶೂಲ; ಎಡ ಕೈಗಳಲ್ಲಿ ಶಂಖ, ಗುರಾಣಿ, ಬಿಲ್ಲು, ಕಮಲ.

ಮಹಿಷಾಸುರನನ್ನು ಸಂಹರಿಸುವುದು ಸುಲಭದ ಕೆಲಸವಾಗಿರಲಿಲ್ಲ ಅವನು ದೊಡ್ಡ ದೈತ್ಯ ರಾಕ್ಷಸ ತ್ರಿಮೂರ್ತಿಗಳಿಗೇ ಕಾಟ ಕೊಟ್ಟವನು. ಕೋಣನ ರೂಪದಲ್ಲಿ ಬಂದು ಆಕ್ರಮಣ ಮಾಡುವುದನ್ನು ದೇವಿಯು ಅರಿತು ಕೋಣನ ಶಿರಚ್ಛೇದನ ಮಾಡಿದಾಗ ಮಹಿಷಾಸುರ ತನ್ನ ನಿಜ ರಾಕ್ಷಸರೂಪದಲ್ಲಿ ಹೊರಬಂದ ತತ್‌ಕ್ಷಣ ತ್ರಿಶೂಲದಿಂದ ಸಂಹರಿಸುತ್ತಾಳೆ, ರೋಷಾವೇಶದಿಂದ ಇದ್ದ ಸಿಂಹವು ಮಹಿಷಾಸುರನ ಶಿರವನ್ನು ಕಚ್ಚಿಹಿಡಿದುಕೊಂಡಿರುವುದು, ದೇವಿಯು ಸಂಹಾರದ ನಂತರ ಮುಖದಲ್ಲಿ ಸಮಾಧಾನವನ್ನು ಶಿಲ್ಪಿಯು ಕಲಾತ್ಮಕವಾಗಿ ತೋರಿಸಿರುತ್ತಾರೆ.

– ಲೇಖಕರು

ಮೊದಲ ಮಾತು

ನನ್ನ ತಂದೆ ವಿಶ್ವರೂಪಾಚಾರ್ಯರವರಿಗೆ ಮೂವರು ಮಕ್ಕಳು, ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಅಕ್ಕ. ಮೂವರು ಮಕ್ಕಳಲ್ಲಿ ನಾನೊಬ್ಬನೇ ವಿದ್ಯಾವಂತನಾದೆ. ನನ್ನ ತಮ್ಮ ನಮ್ಮ ಹಿರಿಯರಂತೆಯೇ ಶಿಲ್ಪ ವೃತ್ತಿಯನ್ನೇ ಮುಂದುವರೆಸಿ ಪ್ರಖ್ಯಾತರಾದರು. ನಾನು ಎಂ.ಎ. (ಭೂಗೋಳ ಶಾಸ್ತ್ರ) ಪದವಿ ಪಡೆದು Indian Council Agricultural Research (ICAR) ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿ ವಿವಿಧ ಹುದ್ದೆಗಳನ್ನಲಂಕರಿಸಿ ಅಂತಿಮದಲ್ಲಿ Principal Scientist ಆಗಿ ನಿವೃತ್ತನಾದೆ.

ನಿವೃತ್ತಿಯ ನಂತರ ವಿಶ್ರಾಂತ ಜೀವನ ಸಾಗಿಸುತ್ತಾ ಇರುವ ವೇಳೆಯಲ್ಲಿ ನನಗೊಂದು ಆಲೋಚನೆ ಬಂತು. ನಮ್ಮ ವಂಶದ ಹಿರಿಯರೆಲ್ಲರೂ ಶಿಲ್ಪ ನಿರ್ಮಾಣದಲ್ಲಿ ಖ್ಯಾತರೆನಿಸಿಕೊಂಡಿದ್ದವರು. ಇವರು ನಿರ್ಮಿಸಿದ ಶಿಲ್ಪಗಳು ದೇಶ-ವಿದೇಶಗಳಲ್ಲಿ ಸ್ಥಾಪಿಸಲ್ಪಟ್ಟಿದ್ದು ಕಲಾಸಕ್ತರನ್ನು ಆಕರ್ಶಿಸುತ್ತಿರುವ ವಿಷಯ ನನಗೆ ತಿಳಿದಿತ್ತು ಹಾಗೂ ಈ ಶಿಲ್ಪಿಗಳ ಕುರಿತಾಗಿ ಅನೇಕ ಪತ್ರಿಕಗಳಲ್ಲಿ (ಆಂಗ್ಲ ಪತ್ರಿಕೆಗಳನ್ನೊಳಗೊಂಡಂತೆ) ಪ್ರಕಟಣೆಗೊಂಡಿರುವುದು ನನ್ನ ಗಮನಕ್ಕೆ ಬಂದು, ಅವುಗಳನ್ನೆಲ್ಲ ಸಂಗ್ರಹಿಸಿ ಒಂದು ಗ್ರಂಥವನ್ನೇಕೆ ಪ್ರಕಟಿಸಬಾರದು ಎಂಬ ನಿಟ್ಟಿನಲ್ಲಿ ಕಾರ್ಯೋನ್ಮುಖನಾಗಿ ವಿಷಯ ಸಂಗ್ರಹಿಸಲು ಆರಂಭಿಸಿದೆ. ಕೆಲವೊಂದು ಮಾಹಿತಿಗಳು ನನ್ನ ಮನೆಯಲ್ಲೆಯೇ ದೊರಕಿದವು. ಮತ್ತಷ್ಟು ವಿಷಯಗಳನ್ನು ನನ್ನ ಬಂಧುಗಳು ಮತ್ತು ಮಿತ್ರರಿಂದ ಸಂಗ್ರಹಿಸಿದೆ. ಬರೀ ಸಾಹಿತ್ಯ ಸಿಕ್ಕರೆ ಸಾಲದು ಅದರೊಂದಿಗೆ ಶಿಲ್ಪಿಗಳು ನಿರ್ಮಿಸಿದ ಕಲಾಕೃತಿಗಳ ಚಿತ್ರಗಳು (ಫೋಟೊ) ಅವಶ್ಯಕವೆಂದು, ಅವುಗಳನ್ನೂ ಸಂಗ್ರಹಿಸಲು ತೊಡಗಿದೆ.

ಆಗಿನ ಕಾಲದಲ್ಲಿ ಕ್ಯಾಮರಾ ಬಳಕೆ ಅಷ್ಟಾಗಿ ಇರಲಿಲ್ಲವಾಗಿ, ಶಿಲ್ಪಿಗಳು ನಿರ್ಮಿಸಿದ ಎಲ್ಲ ಶಿಲ್ಪಗಳ ಚಿತ್ರಗಳು ದೊರೆಯಲಿಲ್ಲ. ದೊರಕಿದಷ್ಟು ಚಿತ್ರಗಳನ್ನು ಸಂಗ್ರಹಿಸಿ ಈ ಗ್ರಂಥದಲ್ಲಿ ಪ್ರಕಟಿಸಿದ್ದೇನೆ. ಪೂರ್ಣಗೊಂಡ ಶಿಲ್ಪಕಲಾಕೃತಿಗಳನ್ನಲ್ಲದೆ, ಮೂರ್ತಿ ನಿರ್ಮಾಣದ ಪೂರ್ವದಲ್ಲಿ ತಯಾರಿಸುವ (ಬೇಸಿಕ್ ಮಾಡೆಲ್) ಮೇಣದ ಕೃತಿಗಳ ಚಿತ್ರಗಳನ್ನು ಸಹ ಗ್ರಂಥದಲ್ಲಿ ಪ್ರಕಟಿಸಿರುತ್ತೇನೆ. ಇವುಗಳಲ್ಲದೆ ಗಣ್ಯರು ನೀಡಿರುವ ಪ್ರಶಂಸಾಪತ್ರಗಳು, ಪದಕಗಳು, ಸನ್ಮಾನಪತ್ರ, ಪ್ರಶಸ್ತಿ ಫಲಕಗಳ ಚಿತ್ರಗಳೂ ಇವೆ.

ಚಿತ್ರಗಳನ್ನು ಈ ಪುಸ್ತಕವನ್ನು ಪ್ರಕಟಣೆಗೊಳಿಸಲು ಮತ್ತು ಮಾಹಿತಿಗಳನ್ನು ಒದಗಿಸಿಕೊಟ್ಟ ಎಲ್ಲ ಬಂಧು-ಮಿತ್ರರಿಗೂ ನನ್ನ ಹೃದಯಪೂರ್ವಕ ವಂದನೆಗಳನ್ನು ತಿಳಿಸುತ್ತೇನೆ.

1. ಎನ್.ಸಿ. ಛಾಯಾಪತಿ ಬಿ.ಇ., ಎಂ.ಐ.ಇ. ಹಸ್ತಪ್ರತಿಯನ್ನು ಅಮೂಲಾಗ್ರವಾಗಿ ಓದಿ, ತಿದ್ದಿ ಸೂಕ್ತ ಸಲಹೆಗಳನ್ನಿತ್ತು ಪೀಠಿಕೆಯನ್ನು ಬರೆದುಕೊಟ್ಟ ನಿವೃತ್ತ ಇಂಜಿನೀಯರ್ ಹಾಗೂ 'ವಿಧಾತೃ' ಪತ್ರಿಕೆಯ ಪ್ರಧಾನ ಸಂಪಾದಕ.

2. ಶ್ರೀ ಲಕ್ಷ್ಮೀನಾರಾಯಣ ಮಾಲೀಕರು, ಶ್ರೀ ವಿಶ್ವಕರ್ಮ ಜ್ಯೂವೆಲ್ಲರ್ಸ್ ಮೈಸೂರು, ಶಿಲ್ಪಕಲಾನಿಧಿ ಎನ್. ವಿ. ಚಿನ್ನಾಚಾರ್ಯರು ನಿರ್ಮಾಣ ಮಾಡಿರುವ ಮೇಣದ ಕಲಾಕೃತಿಗಳ ಸಂಗ್ರಹ ಇವರ ಬಳಿ ಇದ್ದು ಅವುಗಳ ಫೋಟೋ ತೆಗೆಯಲು ಸಹಕರಿಸಿದ್ದಾರೆ.

3. ಶ್ರೀ ಎಂ.ವಿ. ಪ್ರಕಾಶ್, ಸಂಚಾಲಕರು ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ, ಮೈಸೂರು, ಇವರು ಶಿಲ್ಪಿ ವೆಂಕಟಾಚಾರ್ಯರಿಗೆ 1886 ಲಂಡನ್‌ನಲ್ಲಿ ಆಯೋಜಿಸಿದ್ದ 'Colonial Exhibition' ನಲ್ಲಿ ದೊರೆತ ರಜತಪದಕ ಮತ್ತು ದಸರಾ ವಸ್ತುಪ್ರದರ್ಶನದಲ್ಲಿ ದೊರೆತ ಮೆಡಲ್ ಫೋಟೋಗಳನ್ನು ನೀಡಿ ಸಹಕರಿಸಿದ್ದಾರೆ.

4. ಶ್ರೀ ಎಮ್. ಎಸ್. ಚಂದ್ರಶೇಖರ, ಮೈಸೂರು – 1969 ರಲ್ಲಿ 'Mysore State Awards for Master Craftman' ಲೋಹಶಿಲ್ಪ ವಿಭಾಗದಲ್ಲಿ ರಾಜ್ಯ ಸರ್ಕಾರವು ನೀಡಿದ ಪದಕದ ಫೋಟೋ ಮತ್ತು ದಸರಾ ವಸ್ತು ಪ್ರದರ್ಶನದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದ ಗಣೇಶಮೂರ್ತಿಯ ಫೋಟೋಗಳನ್ನು ನೀಡಿ ಸಹಕರಿಸಿದ್ದಾರೆ.

5. ಶ್ರೀ ಆರ್. ಅಶ್ವತ್ಥನಾರಾಯಣ, ಕಾರ್ಯದರ್ಶಿ, ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನ ಇವರು ಶಿಲ್ಪಿ ಸೂರ್ಯನಾರಾಯಣಾಚಾರ್ಯರು ಮಾಡಿಕೊಟ್ಟಿರುವ ಬೆಳ್ಳಿಯ ಬಾಗಿಲು, ಬಾಗಿಲವಾಡ, ಪ್ರಭಾವಳಿ ಫೋಟೋಗಳನ್ನು ನೀಡಿ ಸಹಕರಿಸಿದ್ದಾರೆ (1965).

6. ಫೋಟೋ ತೆಗೆಯಲು ಹಾಗೂ ಇನ್ನಿತರ ಸಂಬಂಧಪಟ್ಟ ಕಾರ್ಯಗಳಲ್ಲಿ ನನ್ನೊಂದಿಗೆ ಸಹಕರಿಸಿದ ನನ್ನ ಮೊಮ್ಮಕ್ಕಳನ್ನು ಈ ಸಂದರ್ಭದಲ್ಲಿ ನೆನೆಯುವೆ. ಅವರುಗಳೆಂದರೆ, ಶ್ರೀ ಶ್ರೀಧರ ಡಿ. ಮೂರ್ತಿB.E., ಶ್ರೀ ಸರ್ವೇಶ ಎಸ್. B.E, ಶ್ರೀ ದಯಾನಂದ್ ಶೇಖರ್ ಎಸ್. B.E, ಶ್ರೀ ದಕ್ಷಿತ್ ಶೇಖರ ಎಸ್.

ಪ್ರಭಾಕರ ಎಆರ್‌ಎಸ್.

No.20, 6th Cross, 6th Block
Nagarabhavi 2nd Stage,
Bangalore -560 072

P: 080 23218146, 96113 59842
E: prabhakara.v39@gmail.com

ಪೀಠಿಕೆ

ಕರ್ನಾಟಕದಲ್ಲಿ ಇರುವ ಮಂಡ್ಯ ಜಿಲ್ಲೆಯ ನಾಗಮಂಗಲ ಪಟ್ಟಣವು ಒಂದು ಚಾರಿತ್ರಿಕ ಸ್ಥಳವಾಗಿದೆ. 12ನೇ ಶತಮಾನದಲ್ಲಿ ಈ ಪಟ್ಟಣವು ಹೊಯ್ಸಳ ಸಾಮ್ರಾಜ್ಯದ ಅಧೀನದಲ್ಲಿ ಇತ್ತು, ಈ ಸಮಯದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಶ್ರೀ ಸೌಮ್ಯಕೇಶವ ದೇವಾಲಯ, ಶ್ರೀ ಭದ್ರಕಾಳಿ ದೇವಾಲಯ, ಶ್ರೀ ಕಾಳಿಕಾಂಬಾ ದೇವಾಲಯ ಮುಖ್ಯವಾದವು. ಈ ದೇವಾಲಯಗಳಲ್ಲಿ ಅತಿ ಎತ್ತರವಾದ ವಿಮಾನಗೋಪುರವಿರುವ ದೇವಾಲಯವೆಂದರೆ ಶ್ರೀ ಸೌಮ್ಯಕೇಶವ ದೇವಾಲಯ. ಇದರ ನಿರ್ಮಾತೃ ಹೊಯ್ಸಳ ರಾಜ ವಿಷ್ಣುವರ್ಧನನೆಂದು ಇತಿಹಾಸ ತಿಳಿಸುತ್ತದೆ (ಕ್ರಿ.ಶ.1135). ಈ ಅವಧಿಯಿಂದಲೇ ಶಿಲ್ಪಿಗಳು ನಾಗಮಂಗಲದಲ್ಲಿ ನೆಲೆಸಿದ್ದರೆಂಬುದು ಖಚಿತವಾಗುತ್ತದೆ.

ಈ ಗ್ರಂಥದಲ್ಲಿ ಪ್ರಸ್ತಾಪಿಸಿರುವ ಕಂಪನಿ ಮನೆಯ ಶಿಲ್ಪಿಗಳು 19ನೇ ಶತಮಾನದ ಉತ್ತರಾರ್ಧದಲ್ಲೂ ಮತ್ತು 20ನೇ ಶತಮಾನದ ಅಂಚಿನವರೆಗೂ ಜೀವಿಸಿದ್ದು ಶಿಲ್ಪ ನಿರ್ಮಿಸುವ ಕಾರ್ಯದಲ್ಲಿ ಮಗ್ನರಾಗಿದ್ದರು. ಇವರು ನಿರ್ಮಾಣ ಮಾಡಿರುವ ಶಿಲ್ಪಗಳು ನೂರಾರು. ಆದರೆ ಲಭ್ಯವಿರುವ ಕಲಾಕೌಶಲ್ಯದಿಂದ ಕೂಡಿರುವ ಹಲವಾರು ಶಿಲ್ಪಗಳ ಚಿತ್ರಗಳನ್ನು ಈ ಗ್ರಂಥದಲ್ಲಿ ಕೊಡಲಾಗಿದೆ. ಈ ಶಿಲ್ಪಗಳ ಸೊಬಗನ್ನು ನೋಡಿದ ಅನೇಕ ವಿದ್ವಾಂಸರು, ರಾಜ ಮಹಾರಾಜರು, ಆಡಳಿತಗಾರರು ಶಿಲ್ಪಿಗಳನ್ನು ತಮ್ಮದೇ ಶೈಲಿಯಲ್ಲಿ ಹೊಗಳಿ, ವರ್ಣಿಸಿ, ಗೌರವಿಸಿದ್ದಾರೆ.

ಶಿಲ್ಪಿಯು ಶಿಲ್ಪ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಾದರೆ ಶಿಲ್ಪ ಶಾಸ್ತ್ರಗಳ ಗ್ರಂಥಗಳನ್ನು ಅಧ್ಯಯನ ಮಾಡಿರಬೇಕು. ನುರಿತ ಶಿಲ್ಪಿಗಳ ಬಳಿ ಇದ್ದು ಶಿಲ್ಪ ರಚನಾ ಕಾರ್ಯವಿಧಾನ ಪ್ರಾತ್ಯಕ್ಷಿಕೆ(practical)ಯಲ್ಲಿ ಭಾಗಿಯಾಗಿ ಅನುಭವ ಪಡೆದಿರಬೇಕು. ಇದಕ್ಕೆ ಹಲವಾರು ವರ್ಷಗಳೇ ಬೇಕಾಗುತ್ತದೆ. ಹಿಂದೆ ಶಿಲ್ಪಕಲೆ ಕಲಿಸಲು ಯಾವ ಶಾಲೆಗಳೂ ಇರಲಿಲ್ಲ. ಶಿಲ್ಪಕಲೆಯು ಪರಂಪರೆ ಕಲೆಯಾಗಿಯೇ ಮುಂದುವರಿಯುತ್ತಿತ್ತು. ಈ ಪರಂಪರೆಗೆ ಸೇರಿದವರು ವೈಶ್ವಕರ್ಮಣರೇ ಆಗಿರುತ್ತಿದ್ದುದು ವಿಶೇಷ ಹಾಗೂ ಹೆಮ್ಮೆಯ ವಿಷಯ.

ಈ ಶಿಲ್ಪ ರಚನೆಯ ಸಂಬಂಧ ಶಿಲ್ಪ ಶಾಸ್ತ್ರಗಳು ಏನು ಹೆಳುತ್ತವೆ ಎಂಬುದನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಳ್ಳುವುದು ಅವಶ್ಯಕ. ಶಿಲ್ಪ ರಚನಾಕಾರ್ಯದಲ್ಲಿ ಶಿಲ್ಪಿಯ ಪಾತ್ರವೇನು, ಅವನಿಗೆ ಯಾವ ರೀತಿಯ ಸಂಸ್ಕಾರವಿರಬೇಕು. ಶಿಲ್ಪ ರಚನೆಯಲ್ಲಿ ತೊಡಗಿದಾಗ ಅವನ ಮನಸ್ಥಿತಿ ಹೇಗಿರಬೇಕು ಎಂಬ ವಿಷಯಗಳ ಕುರಿತಾಗಿ ವೇದ ವಿದ್ವಾಂಸರಾದ ಸಾ. ಕೃ. ರಾಮಚಂದ್ರರಾವ್‌ರವರು ತಮ್ಮ ಸಾಂಪ್ರದಾಯಿಕ ಶಿಲ್ಪಕಲೆ ಗ್ರಂಥದಲ್ಲಿ ವಿವರಿಸಿದ್ದಾರೆ.

ಓದುಗರು ಶಿಲ್ಪಕಲೆಯ ವಿಷಯವಾಗಿ ಸ್ವಲ್ಪಮಟ್ಟಿಗಾದರೂ ತಿಳಿದಿದ್ದರೆ, ಶಿಲ್ಪಿ ನಿರ್ಮಿಸಿದ ಶಿಲ್ಪಕಲಾ ಕೌಶಲ್ಯವನ್ನು ಶಿಲ್ಪ ಸೌಂದರ್ಯವನ್ನರಿಯಲು ಸಹಾಯವಾಗುವುದಲ್ಲದೆ ಶಿಲ್ಪಗಳನ್ನು ಕೇವಲ ಬೊಂಬೆಗಳಂತೆ ಪರಿಗಣಿಸುವ ಬದಲು ಶಿಲ್ಪ ಕಲೆಯನ್ನು ಸವಿಯಬಹುದಾಗಿರುತ್ತದೆ.

ಈ ರೀತಿ ಶಾಸ್ತ್ರಬದ್ಧವಾಗಿ ಶಿಲ್ಪಗಳನ್ನು ನಿರ್ಮಿಸುವಲ್ಲಿ ನಾಗಮಂಗಲದ ಕಂಪನಿಮನೆಯ ಶಿಲ್ಪಿಗಳು ಖ್ಯಾತರಾಗಿದ್ದರು. ದೇವಾಲಯಕ್ಕೆ ಮುಖ್ಯವಾಗಿ ಬೇಕಾಗಿರುವ ಉತ್ಸವಮೂರ್ತಿಗಳು, ಅದಕ್ಕೆ ಬೇಕಾಗುವ ಪೀಠೋಪಕರಣಗಳು, ಪ್ರಭಾವಳಿ, ಗರ್ಭಗುಡಿಯ ಬಾಗಿಲವಾಡಗಳು, ಪ್ರವೇಶದ್ವಾರದ ಗರುಡಕಂಭಗಳು, ಪೂಜಾ ಸಲಕರಣೆಗಳು ಮುಂತಾದವನ್ನು ಈ ಶಿಲ್ಪಿಗಳು ತಯಾರಿಸುತ್ತಿದ್ದರು. ಉತ್ಸವ ಮೂರ್ತಿಗಳನ್ನು ಸಾಮಾನ್ಯವಾಗಿ ಮಾಡುವುದು ಪಂಚಲೋಹದಲ್ಲಿ (ಹಿತ್ತಾಳೆ, ತಾಮ್ರ, ತವರ, ಅಲ್ಪ ಪ್ರಮಾಣದಲ್ಲಿ ಬೆಳ್ಳಿ ಮತ್ತು ಚಿನ್ನ).


ಲೋಹದ ಮೂರ್ತಿಯನ್ನು ತಯಾರಿಸುವ ಮೊದಲು ಶಿಲ್ಪಿಯು ರೇಖಾಚಿತ್ರ ರಚಿಸಿ, ಅದರಂತೆ ಮೂರ್ತಿಯನ್ನು ಮೇಣದಲ್ಲಿ ತಯಾರಿಸಬೇಕು. ಮೇಣದ ಮೂರ್ತಿ ಎಷ್ಟು ಕಲಾತ್ಮಕವಾಗಿರುವುದೋ ಮುಂದೆ ಎರಕ ಹೊಯ್ದ ಮೂರ್ತಿಯು ಅಷ್ಟೇ ಸುಂದರವಾಗಿ ಮೂಡುತ್ತದೆ. ಇಲ್ಲಿ ಶಿಲ್ಪಿಯ ಕೈಚಳಕ, ಅನುಭವ, ಪ್ರಬುದ್ಧತೆ ಪ್ರಾಮುಖ್ಯ ಪಡೆದಿರುತ್ತದೆ. ಇದು ಶಿಲ್ಪಿಗೆ ಅನೇಕ ತಲೆಮಾರುಗಳಿಂದ ರಕ್ತಗತವಾಗಿ ಬಂದಿರುತ್ತದೆ. ಒಂದು ಇಂಗ್ಲೀಷ್ ಗಾದೆಯಂತೆ **'An artist is born, not made.'**

ಎನ್.ಸಿ. ಛಾಯಾಪತಿ, ಬಿ.ಇ., ಎಂ.ಐ.ಇ.
ನಿವೃತ್ತ ಉಪ ಮುಖ್ಯ ಇಂಜಿನಿಯರ್
ನೀರಾವರಿ ಇಲಾಖೆ, ಕರ್ನಾಟಕ ಸರ್ಕಾರ
ಸಂಪಾದಕರು ಮತ್ತು ಪ್ರಕಾಶಕರು
'ವಿಧಾತೃ' ಮಾಸಪತ್ರಿಕೆ, ಬೆಂಗಳೂರು

ಅರ್ಪಣೆ



ಶ್ರೀಮತಿ ಕಸ್ತೂರಮ್ಮ
(1910 – 1992)



ಶಿಲ್ಪಿ ಎನ್.ವಿ. ಸೂರ್ಯನಾರಾಯಣಚಾರ್
(1898 – 1980)

ಚಿತ್ರದಲ್ಲಿರುವ ನನ್ನ ದೊಡ್ಡಮ್ಮ ಮತ್ತು ದೊಡ್ಡಪ್ಪನವರು ನನ್ನನ್ನು ಸಾಕಿ ಸಲಹಿ ನನ್ನ ವಿದ್ಯಾಭ್ಯಾಸಕ್ಕೆ ಸಂಪೂರ್ಣ ಬೆಂಬಲ ಕೊಟ್ಟು ಸ್ನಾತಕೋತ್ತರ ಪದವೀಧರನನ್ನಾಗಿ ಮಾಡಿ ನನಗೆ ದಾರಿದೀಪವಾದರು. ಇವರುಗಳಿಗೆ ಕೃತಜ್ಞತಾಪೂರ್ವಕವಾಗಿ ಈ ಪುಸ್ತಕವನ್ನು ಅರ್ಪಿಸುತ್ತಿದ್ದೇನೆ.

– **ಪ್ರಭಾಕರ,** ARS

ಪರಿವಿಡಿ

1) ಮುನ್ನುಡಿ 3
2) ಅಭಿನಂದನೆಗಳು 5
3) ಕಲೆಗೆ ಶಿಖರಪ್ರಾಯವಾದ ಮನೆತನಗಳು 6
4) ಶುಭ–ಸಂದೇಶ 8
5) ಮುಖಪುಟ ಚಿತ್ರದ ಬಗ್ಗೆ 10
6) ಮೊದಲ ಮಾತು 11
7) ಪೀಠಿಕೆ 13
8) ಅರ್ಪಣೆ 15

ಕಂಪನಿಮನೆ ಶಿಲ್ಪಿಗಳು

ಕಂಪನಿಮನೆ ಶಿಲ್ಪಿ ವೆಂಕಟಾಚಾರ್ಯ 19
ಶಿಲ್ಪಕಲಾನಿಧಿ ಎನ್.ವಿ. ಚೆನ್ನಾಚಾರ್ 22
ಶಿಲ್ಪಿ ಎನ್.ವಿ. ಸೂರ್ಯನಾರಾಯಣಾಚಾರ್ 36
ಶಿಲ್ಪಿ ಎನ್.ವಿ. ವಿಶ್ವರೂಪಾಚಾರ್ 40

ಚಿತ್ರಗಳು **41**

ಆಧಾರಗಳು 87

ಕಂಪನಿಮನೆ ಶಿಲ್ಪಿಗಳು

ಕರ್ನಾಟಕ ರಾಜ್ಯ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ **2003ರ** **'ಭಾರತದ ಗೆಜೆಟಿಯರ್'**ನ ಸಾಹಿತಿ ಮತ್ತು ಸಂಸ್ಕೃತಿ ಅಧ್ಯಾಯದಲ್ಲಿ ಶಿಲ್ಪಕಲಾವಿದರುಗಳ ಬಗ್ಗೆ ಪುಟ-789 ರಲ್ಲಿ ಉಲ್ಲೇಖಿಸಲಾಗಿದೆ. ಇಪ್ಪತ್ತನೆ ಶತಮಾನದ ಆರಂಭದಲ್ಲಿ ನಾಗಮಂಗಲದ ವೆಂಕಟಾಚಾರ್ಯರು ಸೇರಿದಂತೆ ಹಲವಾರು ಪ್ರಸಿದ್ಧ ಶಿಲ್ಪಿಗಳು ಶ್ರೀಕಂಠಾಚಾರ್ಯರು, ಚಿಕ್ಕಣ್ಣಾಚಾರ್ಯ, ಪುಟ್ಟಣ್ಣಾಚಾರ್ಯ ಮುಂತಾದ ಅನೇಕ ಶಿಲ್ಪಿಗಳೊಡನೆ ಅಗ್ರಹಾರದ ಹತ್ತಿರ ಒಂದು ಕಾರ್ಯಗಾರವನ್ನು (ಸುಮಾರು 10 ರಿಂದ 15 ಶಿಲ್ಪಿಗಳು) ನಡೆಸುತ್ತಿದ್ದು ನಾಗಮಂಗಲ ಹಾಗೂ ಸುತ್ತಮುತ್ತ ದೇವಸ್ಥಾನದ ಬೇಡಿಕೆಗಳನ್ನು ಪೂರೈಸಿಕೊಡುತ್ತಿದ್ದರು. ಕಾಲಕ್ರಮೇಣ ಇವರಿಗೆ **ಕಂಪನಿಮನೆ** (ಗುಂಪಾಗಿ ಕೆಲಸ ಮಾಡುತ್ತಿದ್ದುದರಿಂದ) ಶಿಲ್ಪಿಗಳೆಂದು ಕರೆಯಲಾರಂಭಿಸಿದರು. ಮುಂದೆ ಇದೇ ಹೆಸರು ಬಳಕೆಗೆ ಬಂದು ಇಂದಿಗೂ ಹಾಗೆಂದೇ ಕರೆಯುವುದು ರೂಢಿಯಲ್ಲಿದೆ.

ಈ **ಕಂಪನಿಮನೆ**ಯ ಶಿಲ್ಪಿಗಳ ಪರಂಪರೆಯಲ್ಲಿ ಮೊದಲಿಗರು ಶಿಲ್ಪಿ ವೆಂಕಟಾಚಾರ್ಯರು ನಂತರದಲ್ಲಿ ಶಿಲ್ಪಿ ಎನ್.ವಿ. ಚಿನ್ನಾಚಾರ್, ಎನ್.ವಿ. ಸೂರ್ಯನಾರಾಯಣಾಚಾರ್, ಎನ್. ವಿ. ವಿಶ್ವರೂಪಾಚಾರ್, ಶಿಲ್ಪಿ ಆದಿತ್ಯ ಮುಂತಾದವರು. ಇವರೆಲ್ಲರೂ ತಮ್ಮದೇ ಆದ ರೀತಿಯಲ್ಲಿ ಶಿಲ್ಪಕಲೆಗೆ ತಮ್ಮ ಕೊಡುಗೆ ನೀಡಿರುತ್ತಾರೆ.

1. ಕಂಪನಿಮನೆ ಶಿಲ್ಪಿ ವೆಂಕಟಾಚಾರ್ಯ
(1840–1914)

ಶಿಲ್ಪಿ ವೆಂಕಟಾಚಾರ್ಯರು ನಾಗಮಂಗಲದ ನಿವಾಸಿಗಳಾಗಿ ಶಿಲ್ಪಕಾರ್ಯದಲ್ಲಿ ತೊಡಗಿಸಿಕೊಂಡು ಜೀವನ ಸಾಗಿಸುತ್ತಿದ್ದವರು. ಇವರು ತಯಾರಿಸಿದ ಶಿಲ್ಪಗಳು ಶಾಸ್ತ್ರಬದ್ಧವಾಗಿ ಕಲಾ ಕೌಶಲ್ಯದಿಂದ ಕೂಡಿರುತ್ತಿದ್ದು ಎಲ್ಲರ ಗಮನ ಸೆಳೆಯುತ್ತಿತ್ತು. ಇದರಿಂದಾಗಿ ಇವರಿಗೆ ಮೈಸೂರಿನಿಂದಲೂ ಬೇಡಿಕೆಗಳು ಬರುತ್ತಿದ್ದವು. ಈ ರೀತಿ ಮೈಸೂರಿನಿಂದ ಬರುವ ಬೇಡಿಕೆಗಳು ಹೆಚ್ಚಾಗಿ **1878** ರ ಸುಮಾರಿಗೆ ತಮ್ಮ ಮಕ್ಕಳೊಂದಿಗೆ ಮೈಸೂರಿಗೆ ಸ್ಥಳಾಂತರಿಸಿ ಅಲ್ಲಿಯೇ ಶಿಲ್ಪಕಾರ್ಯದಲ್ಲಿ ನಿರತರಾದರು. ಇವರ ಶಿಲ್ಪಕಲೆಯ ಖ್ಯಾತಿ ಶೀಘ್ರದಲ್ಲೇ ಮೈಸೂರಿನಲ್ಲೆಲ್ಲಾ ಹರಡಿ ಮೈಸೂರು ಮಹಾರಾಜರ ಗಮನಕ್ಕೂ ಹೋಗುವಂತಾಯಿತು.

1886 ರಲ್ಲಿ ಲಂಡನ್‌ನಲ್ಲಿ ಆಯೋಜಿಸಿದ್ದ **'Colonial and Indian exhibition'** ವಸ್ತು ಪ್ರದರ್ಶನಕ್ಕೆಂದು ವೆಂಕಟಾಚಾರ್ಯರು ನಿರ್ಮಾಣ ಮಾಡಿದ್ದ ಮೂರುವರೆ ಅಡಿ ಎತ್ತರದ ಪಂಚಲೋಹದಿಂದ ನಿರ್ಮಿಸಿದ ನಟರಾಜ ಮೂರ್ತಿಯನ್ನು ಆಯ್ಕೆ ಮಾಡಿ ಚಾಮರಾಜ ಒಡೆಯರ್‌ರವರು ಕಳುಹಿಸಿಕೊಟ್ಟಿದ್ದರು. ಈ ನಟರಾಜ ವಿಗ್ರಹವು ವಿದೇಶಿಯ ಕಲಾವಿದರನ್ನು ಆಕರ್ಷಿಸಿದ್ದಲ್ಲದೆ ರಜತ ಪದಕ ಕೂಡ ದೊರೆಯಿತು. (ಚಿತ್ರ 1)

ಸ್ವತಂತ್ರಪೂರ್ವ ಬ್ರಿಟೀಷರ ಆಡಳಿತದಲ್ಲಿ ಮೈಸೂರಿನ ಜೊತೆಗೆ ನಾಗಮಂಗಲವೂ ಖ್ಯಾತಿ ಪಡೆಯುವಂತಾಯಿತು.

ಶ್ರೀ ಚಾಮರಾಜ ಒಡೆಯರ್ ನಂತರ ಮೈಸೂರು ಸಂಸ್ಥಾನದ ಆಡಳಿತದ ಚುಕ್ಕಾಣಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್(1894 - 1940)ರವರಿಗೆ ದೊರಕಿತು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತ ಕಾಲಾವಧಿಯಲ್ಲಿ, ಮೈಸೂರು ಸಂಸ್ಥಾನ ಬಹಳಷ್ಟು ಅಭಿವೃದ್ಧಿ ಹೊಂದಿದ್ದು ಚರಿತ್ರೆಯಿಂದ ತಿಳಿದು ಬರುತ್ತದೆ. ಇವರ ಕಾಲದಲ್ಲಿಯೇ, ಕನ್ನಂಬಾಡಿ ಕಟ್ಟೆ ಇಂದಿನ ಕೃಷ್ಣರಾಜ ಸಾಗರ, ಭದ್ರಾವತಿ ಕಬ್ಬಿಣ

ಮತ್ತು ಸಿಮೆಂಟ್ ಕಾರ್ಖಾನೆ, ಮೈಸೂರು ಲ್ಯಾಂಪ್ಸ್ ಮೈಸೂರು ವಿಶ್ವವಿದ್ಯಾಲಯ ಮುಂತಾದವು ಸ್ಥಾಪಿಸಲ್ಪಟ್ಟಿತು.

ಆ ಕಾಲಕ್ಕೆ ಕುಶಲಕಲೆ, ಶಿಲ್ಪಕಲೆ ಅಭ್ಯಾಸಕ್ಕೆ ಯಾವುದೇ ಶಿಕ್ಷಣ ಶಾಲೆ ಇಲ್ಲದಿರುವುದನ್ನು ಅಂದಿನ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಮನಗಂಡು, ಕಲಾಭಿಮಾನಿಯಾಗಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ಒಂದು ಕಲಾಶಾಲೆ ಸ್ಥಾಪಿಸುವ ಕುರಿತು ಸಲಹೆ ನೀಡಲಾಗಿ, ಕೂಡಲೇ ಒಪ್ಪಿಗೆ ನೀಡಿದರು. ಹೀಗೆ ಕೌಶಲ್ಯಕಲೆಗಳ ಶಿಕ್ಷಣಕ್ಕಾಗಿ ಸ್ಥಾಪನೆಗೊಂಡ ಶಾಲೆಯೇ ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಈಗಿನ **ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್(C.T.I).** (ಚಿತ್ರ 2)

ಈ ಶಾಲೆ ನಿರ್ಮಿಸುವ ಸಂಬಂಧ 'ಶಂಕುಸ್ಥಾಪನೆ' ಕಾರ್ಯ ನೆರವೇರಬೇಕಾಗಿತ್ತು. ಶಂಕುಸ್ಥಾಪನೆಗೆ ವಾಸ್ತುಶಾಸ್ತ್ರದ ಪ್ರಕಾರ ಬೇಕಾಗಿದ್ದ 'ಕರಂಡ' ನಿರ್ಮಿಸಲು ಶಿಲ್ಪಿ ವೆಂಕಟಾಚಾರ್ಯರಿಗೆ ವಹಿಸಲಾಯಿತು. ವಾಸ್ತು ಶಾಸ್ತ್ರದ ಪ್ರಕಾರ ಒಂದೂವರೆ ಅಡಿ ಎತ್ತರದ ಸೇರಿನಾಕಾರದ **ಕರಂಡ**ವನ್ನು ನಿರ್ಮಿಸಿ ಅದರ ಸುತ್ತಲೂ ಅವಶ್ಯವೆನಿಸುವ ಮನಮೋಹಕವಾದ ಚಿತ್ರಗಳನ್ನು ಬಿಡಿಸಿದ್ದರು. ಕರಂಡದ ಮುಚ್ಚಳದ ಮೇಲ್ಭಾಗದಲ್ಲಿ ಶ್ರೀ ವಿಶ್ವಕರ್ಮನ ಮೂರ್ತಿಯನ್ನು ಸೃಷ್ಟಿಸಿದ್ದರು. ಕಲಾತ್ಮಕವಾದ ಕರಂಡವನ್ನು ನೋಡಿದ Frederic Ernest Albert, Prince of Wales ಮತ್ತು ನಾಲ್ವಡಿ ಕೃಷ್ಣರಾಜ ಒಡಯರ್ ರವರುಗಳು ಪ್ರಶಂಸಿಸಿ ವೆಂಕಟಾಚಾರ್ಯರನ್ನು ಸನ್ಮಾನಿಸಿದರು. ಇದು **ಶಿಲ್ಪಶಾಲೆಗೆ ನಾಂದಿಯಾಯಿತು**. ಶಂಕುಸ್ಥಾಪನೆಯ ಕಾರ್ಯಕ್ರಮವು ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಕ್ಷತೆಯಲ್ಲಿ **'ಪ್ರಿನ್ಸ್ ಆಫ್ ವೇಲ್ಸ್'**ರವರ ಹಸ್ತದಿಂದ ನೆರವೇರಿಸಲಾಯಿತು. ಕರಂಡವನ್ನು ಭೂಮಿಯೊಳಗೆ ಇಡಲಾಯಿತು.

ಶಿಲ್ಪಿ ವೆಂಕಟಾಚಾರ್ಯರು ನಿರ್ಮಿಸಿ ಲಭ್ಯವಿರುವ ಎರಡು ಕೃತಿಗಳು. ಬಾಲಕೃಷ್ಣ ವಿಗ್ರಹವನ್ನು ತಾಮ್ರದಲ್ಲಿ ಮಾಡಲಾಗಿದೆ. ಇದು ಸುಮಾರು ನೂರಾ ನಲವತ್ತು ವರ್ಷಗಳ ಹಳೆಯದು. ಗಮನಿಸಿ ದೇಹದ ತೂಕವನ್ನು ತನ್ನ ಎಡಗಾಲು ಪಾದದ ಮೇಲೆ ಬಿದ್ದಿರುವುದನ್ನು, ಬಲಗೈಯಲ್ಲಿ ಬೆಣ್ಣೆಯನ್ನು ಹಿಡಿದುಕೊಂಡಿರುವುದು, ಉಡುದಾರದಲ್ಲಿರುವ ಗಂಟೆಗಳು ಎಲ್ಲವೂ ಕಲಾತ್ಮಕವಾಗಿವೆ. (ಮುಖವು ಸವೆದಿರುವುದನ್ನು ಕೂಡ ಗಮನಿಸಬಹುದು. ಕಾರಣ ಏಕಲೋಹ ತಾಮ್ರ.) (ಚಿತ್ರ 3) ಈ ಮೂರ್ತಿಯು ಕೇವಲ ಮೂರು ಇಂಚು ಎತ್ತರವಿರುವುದು — ಕಲೆಗೆ ಚಿಕ್ಕದಾದರೇನು ದೊಡ್ಡದಾದರೇನು?

ಇವರ ಇನ್ನೊಂದು ಕೃತಿ ಶುದ್ಧ ಹಿತ್ತಾಳೆಯಲ್ಲಿ ಮಾಡಿರುವ ಮಂದಹಾಸನ ಚಿತ್ರದಲ್ಲಿ ಕಂಡುಬರುವ ಇತರ ವಸ್ತುಗಳು ಬೇರೆಯವರು ಮಾಡಿರುತ್ತಾರೆ. (ಚಿತ್ರ 4)

ಈ ಶಾಲೆಯಲ್ಲಿ (C.T.I) ಶಿಲ್ಪಕಲೆ, ಚಿತ್ರಕಲೆ, ಕುಶಲಕಲೆಗಳನ್ನು ಕಲಿಸುವ Theory and practical ಮೂರು ವರ್ಷದ ಸರ್ಟಿಫಿಕೇಟ್ ಕೋರ್ಸ್ ಮತ್ತು ಐದು ವರ್ಷದ ಡಿಪ್ಲೊಮಾ ಆರಂಭಿಸಲಾಯಿತು. ಹನ್ನೊಂದು ವಿವಿಧ ಕಲೆಗಳ ವಿಭಾಗಗಳಿದ್ದವು. ಪ್ರತಿಯೊಂದು ವಿಭಾಗಕ್ಕೆ ಒಬ್ಬೊಬ್ಬ ವಿಷಯ ತಜ್ಞರನ್ನು ನೇಮಿಸಲಾಯಿತು. ಇವುಗಳಲ್ಲಿ ಮೆಟಲ್ ಸೆಕ್ಷನ್ ಒಂದು ವಿಭಾಗ ಈ ವಿಭಾಗದ ವಿಷಯ ತಜ್ಞರನ್ನು ಮೆಟಲ್ ಇನ್ಸ್ಪೆಕ್ಟರ್ ಎಂದು ಕರೆಯುತ್ತಿದ್ದರು. ಇವರಿಗಿದ್ದ ಎರಡು ಕೆಲಸಗಳೆಂದರೆ ವಿಭಾಗಕ್ಕೆ ಬಂದ ಶಿಲ್ಪಕಲಾ ಕೆಲಸಗಳನ್ನು ಮಾಡಿಕೊಡುವುದು (ಪಂಚಲೋಹ, ಬೆಳ್ಳಿಯ ವಿಗ್ರಹ ಹಾಗೂ ದೇವಸ್ಥಾನಗಳಿಗೆ ಅವಶ್ಯಕವಾದ ಬಾಗಿಲವಾಡ, ಪ್ರಭಾವಳಿಗಳು ಇತ್ಯಾದಿ) ಹಾಗೂ ವಿದ್ಯಾರ್ಥಿಗಳಿಗೆ ಶಿಲ್ಪಕಲೆಯ ಶಿಕ್ಷಣ ಹಾಗೂ ತರಬೇತಿ ನೀಡುವುದು.

ಈ ಮೆಟಲ್ ಸೆಕ್ಷನ್ ವಿಭಾಗಕ್ಕೆ ಪ್ರಪ್ರಥಮವಾಗಿ ಕೆಲಸಕ್ಕೆ ಸೇರಿದವರು ನಾಗಮಂಗಲದ ಕಂಪನಿ ಮನೆಯ ವೆಂಕಟಾಚಾರ್ಯರು. ನಂತರ ಇವರ ಸಹೋದರ ಶಿಲ್ಪಿಗಳು ಸುಮಾರು ಐವತ್ತಾರು ವರ್ಷಗಳ ಕಾಲ ಈ ಶಿಲ್ಪಕಲಾ ವಿಭಾಗದಲ್ಲಿ ನಿಷ್ಠೆಯಿಂದ ಸೇವೆಯನ್ನು ಸಲ್ಲಿಸಿ ಅನೇಕ ಶಿಲ್ಪ ಕಲಾಕೃತಿಗಳನ್ನು ರಚಿಸಿ ಪ್ರಖ್ಯಾತರೆನಿಸಿಕೊಂಡರು.



೨. ಶಿಲ್ಪ ಕಲಾನಿಧಿ ಶಿಲ್ಪಿ ಎನ್.ವಿ. ಚಿನ್ನಾಚಾರ್
(1893 - 1976)

ಚಿನ್ನಾಚಾರ್ಯರು ದಿನಾಂಕ:23–03–1893ರಲ್ಲಿ ನಾಗಮಂಗಲದಲ್ಲಿ ಜನಿಸಿದರು. ತಂದೆ ವೆಂಕಟಾಚಾರ್ಯ, ಆರು ಜನ ಮಕ್ಕಳಲ್ಲಿ ಚಿನ್ನಾಚಾರ್ಯರು ದ್ವಿತೀಯ ಪುತ್ರರು.

ಚಿನ್ನಾಚಾರ್ಯರು ಬಾಲ್ಯದಿಂದಲೂ ತಂದೆಯವರು ಮಾಡುತ್ತಿದ್ದ ಕಂಚಿನ ವಿಗ್ರಹಗಳನ್ನು ನೋಡಿ, ಅದರಂತೆ ಒರಟು ಒರಟಾದ ಕರಡು ವಿಗ್ರಹಗಳನ್ನು ಮಾಡುತ್ತಿದ್ದರು. ಇದನ್ನು ಗಮನಿಸಿದ ತಂದೆ ವೆಂಕಟಾಚಾರ್ಯರು ಮಗನ ಬುದ್ಧಿಶಕ್ತಿ ವಂಶಪಾರಂಪರ್ಯವಾದ ವೃತ್ತಿಯ ಕಡೆಗೆ ಹರಿದಿರುವುದನ್ನು ನೋಡಿ ಆನಂದಪಡುತ್ತಿದ್ದರು. ವಂಶದ ಕೀರ್ತಿ ಈ ಬಾಲಕ ಮುನ್ನಡೆಸುವ ಛಾತಿ ಹೊಂದಿರುವುದಾಗಿ ತಿಳಿದರು. ಬಾಲಕ ಚಿನ್ನಾಚಾರ್ಯರಿಗೆ ಹತ್ತನೇ ವಯಸ್ಸಿನಲ್ಲಿ ಬ್ರಹ್ಮೋಪದೇಶ ಮಾಡಲಾಯಿತು. ಆ ವೇಳೆಗೆ ಬಾಲಕನು ವಿಗ್ರಹಗಳನ್ನು ಸೂಕ್ಷ್ಮವಾಗಿಯೂ ಪ್ರಮಾಣಕ್ಕೆ ತಕ್ಕಂತೆ ಕಡೆಯುವ ರೂಢಿ ಬೆಳೆದು ಬಂದಿತ್ತು. ಇದಕ್ಕೆ ತಂದೆಯವರ ಪ್ರೋತ್ಸಾಹ ಮತ್ತು ರಕ್ತಗತವಾಗಿ ಬಂದಿದ್ದ ಕಲೆಯೆಂದರೆ ತಪ್ಪಾಗಲಾರದು.

ಮೈಸೂರಿನಲ್ಲಿ ತಮ್ಮ ತಂದೆ ವೆಂಕಟಾಚಾರ್ಯರೊಂದಿಗೆ ಬಾಲಕ ಚಿನ್ನಾಚಾರ್ಯನು ಶಿಲ್ಪ ನಿರ್ಮಾಣದ ಕಾರ್ಯದಲ್ಲಿ ನಿರತರಾದರು. ಚಿನ್ನಾಚಾರ್ಯರು ರಚಿಸಿರುವ

ಕೃತಿಗಳೆಲ್ಲ ಬಹುಮಟ್ಟಿಗೆ ಮನಮೋಹಕ ಮೂರ್ತಿಗಳು. ಇವುಗಳಲ್ಲಿ ಹಸ್ತ ವಿನ್ಯಾಸ ಮುದ್ರೆಗಳಾಗಲೀ ಎಲ್ಲವೂ ಶಾಸ್ತ್ರೋಕ್ತವಾಗಿ ಮೂಡಿ ಬಂದಿರುತ್ತವೆ. ಇವರು ಐದಾರು ದಶಕದಲ್ಲಿ ನಿರ್ಮಿಸಿದ ಶಿಲ್ಪಗಳನ್ನು ಕಂಡು ಕೊಂಡಾಡದವರಿಲ್ಲ.

ಇವರು ರಚಿಸಿರುವ ಉಗ್ರಮೂರ್ತಿಗಳಲ್ಲಿ ಶ್ರೀ ಚಾಮುಂಡೇಶ್ವರಿಯ ವಿಗ್ರಹವೂ ಒಂದು. ಇದು ಆಕಾರದಲ್ಲಿ ದೊಡ್ಡದಾಗಿಯೂ ಅನೇಕ ಬಾಹುಗಳನ್ನುಳ್ಳದ್ದಾಗಿಯೂ ಶೋಭಿಸುತ್ತದೆ. ಮುಖದಲ್ಲಿ ಕೋರೆ ದವಡೆ, ಕತ್ತಿನಲ್ಲಿ ರುಂಡಮಾಲೆ ಇಂತಹ ಮೂರ್ತಿಯನ್ನು ರಚಿಸುವುದೆಂದರೆ ಆಚಾರ್ಯರಿಗೆ ಉತ್ಸಾಹ ಬರುತ್ತಿತ್ತು.


ಚಿನ್ನಾಚಾರ್ಯರ ತಂದೆ C.T.I. ನಲ್ಲಿ ಮೆಟಲ್ ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿಯ ನಂತರ, ಇವರ ಜಾಗವನ್ನು ಮಗ ಎನ್.ವಿ. ಸೂರ್ಯನಾರಾಯಣಾಚಾರ್ಯರು ತುಂಬಿದರು. ಈ ಕಲಾಶಾಲೆಯಲ್ಲಿ ಸುಮಾರು 40 ವರ್ಷಗಳಕಾಲ ತಮ್ಮ ಉತ್ತಮ ಸಲ್ಲಿಸಿ ಶಾಲೆಯ ಘನತೆಯನ್ನು ಹೆಚ್ಚಿಸಿದರು.

ಒಮ್ಮೆ ಈ ಕಲಾಶಾಲೆಗೆ ವಾಷಿಂಗ್‌ಟನ್ನಿನ 'National Geographic' ಪತ್ರಿಕೆಯವರು ಭೇಟಿ ಇತ್ತರು. ಆ ಸಂದರ್ಭದಲ್ಲಿ ಚಿನ್ನಾಚಾರ್ಯರು ನಾಟ್ಯ ಸರಸ್ವತಿಯ ಮೂರ್ತಿಯನ್ನು ಕಡೆಯುತ್ತಿದ್ದರು. ಅದನ್ನು ನೋಡಿ ಅವರು ಬೆಕ್ಕಸಬೆರಗಾದರು. ಚಿನ್ನಾಚಾರ್ಯರು ಕಲೆಯಲ್ಲಿ ಉದ್ಯುಕ್ತರಾಗಿರುವುದರ ಛಾಯಾಚಿತ್ರಗಳನ್ನು ತೆಗೆದುಕೊಂಡು ಹೋಗಿ ತಮ್ಮ ದೇಶದ ಪತ್ರಿಕೆಯಲ್ಲಿ ಪ್ರಚುರಪಡಿಸಿ ಶ್ರೀಯುತರ ಕಲೆಯ ಬಗ್ಗೆ ತುಂಬ ಮೆಚ್ಚುಗೆ ವ್ಯಕ್ತಪಡಿಸಿದರು.

ಚಿನ್ನಾಚಾರ್ಯರು C.T.I. ನ ಸೂಪರಿಂಡೆಂಟ್ H.G. Aldeston ರ ಅವಧಿಯಲ್ಲಿ ನಿರ್ಮಿಸಿದ ನಟರಾಜ ವಿಗ್ರಹ ಮತ್ತು ನಾಟ್ಯಸರಸ್ವತಿ ವಿಗ್ರಹಗಳು **ಬೆಂಗಳೂರು ಆಕಾಶವಾಣಿ ಕೇಂದ್ರದ** ಸ್ಟುಡಿಯೋ ಒಳಭಾಗದಲ್ಲಿ ಗಾಜಿನ ಬಾಗಿಲುಳ್ಳ ಒಂದು ಕೊಠಡಿಯ ಮೇಲ್ಭಾಗದಲ್ಲಿ ರಾರಾಜಿಸುತ್ತಿವೆ. ಇವುಗಳ ಜೊತೆಗೆ ಅಂದಿನ ಖ್ಯಾತ ಕಲಾವಿದರು ಉಪಯೋಗಿಸುತ್ತಿದ್ದ ವೀಣೆ, ತಂಬೂರಿ ಇತ್ಯಾದಿ ಸಂಗೀತ ವಾದ್ಯಗಳನ್ನು ಸಹ ಇಡಲಾಗಿದೆ. ಇಲ್ಲಿ ನೋಡಬಹುದಾದ ವಿಶೇಷತೆಯೆಂದರೆ ಶಿಲ್ಪಿಯು ತನ್ನ ಹೆಸರನ್ನು ನಟರಾಜಪಾದದ ಅಡಿಯಲ್ಲಿರುವ ಪೀಠದಲ್ಲಿ ಕೆತ್ತಿರುವುದನ್ನು ನೋಡಬಹುದು. (ಚಿನ್ನಾಚಾರ್ಯ C.T.I ಮೈಸೂರು ದಿ.1.1.1919) ನಟರಾಜ ಮತ್ತು ಸರಸ್ವತಿಯ ಭಂಗಿ ಮತ್ತು ಮುಖದಲ್ಲಿರುವ ದೈವ ಕಳೆ ಎಂಥವರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ. (ಚಿತ್ರ 5, 6, 7)

ಒಮ್ಮೆ ಬೊಂಬಾಯಿಗೆ ಹೋಗಿಬರುವ ಸದಾವಕಾಶ ಚಿನ್ನಾಚಾರ್ಯರಿಗೆ ದೊರೆಯಿತು. ಅದೂ ಅವರ ಆಪ್ತಮಿತ್ರರಿಂದ, ಚಿನ್ನಾಚಾರ್ಯರು ತಮ್ಮ ಜೊತೆಯಲ್ಲಿ ಕೋದಂಡರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಂತನ ಲೋಹವಿಗ್ರಹಗಳನ್ನು

ತೆಗೆದುಕೊಂಡು ಹೋಗಿದ್ದರು. ಬೊಂಬಾಯಿಯಲ್ಲಿ ಖ್ಯಾತ **'ಮಾತ್ರೆ ಆಂಡ್ ಸನ್ಸ್'** ಕಂಪನಿಯವರ ಗಮನಕ್ಕೆ ಈ ಕೃತಿಗಳು ಬಿದ್ದು ಅವುಗಳ ಮಾಟಕ್ಕೆ ಸೊಗಸಿಗೆ ಈ ಯುವಕ ಚಿನ್ನಾಚಾರ್ಯರನ್ನು ಬಹುವಾಗಿ ಪ್ರಶಂಸಿಸಿ ಖರೀದಿಸಿದರು. ಬೊಂಬಾಯಿಂದ ಹೈದ್ರಾಬಾದಿಗೆ ಬರುವ ದಾರಿಯಲ್ಲಿ ಅಜಂತಾ, ಎಲ್ಲೋರ ಗುಹೆಗಳಲ್ಲಿನ ಕಲಾಕೃತಿಗಳನ್ನು ವೀಕ್ಷಿಸಿದರು. ಅಲ್ಲಿನ ಜೀವಂತ ಕಲೆ ಇವರ ಕಲಾಜೀವನವನ್ನೇ ಬದಲಾಯಿಸಿ ನಿರಂತರ ಸ್ಫೂರ್ತಿಗೆ ಕಾರಣವಾಯಿತು. ಹೈದರಾಬಾದ್ ನಗರದಲ್ಲಿದಷ್ಟು ದಿವಸಗಳೂ ಅಲ್ಲಿನ ಅನೇಕ ಪ್ರತಿಷ್ಠಿತ ವ್ಯಕ್ತಿಗಳನ್ನು ಭೇಟಿಮಾಡಿದ್ದರು. ಅವರಲ್ಲಿ ಲೆಫ್ಟಿನೆಂಟ್ ಕರ್ನಲ್ ಅರಸರ ಪುತ್ರ ರಾಜಕುಮಾರ್ ದೇವರಾಜ ಅರಸು ಅವರ ಸಹಕಾರ ಪ್ರೋತ್ಸಾಹದಿಂದ ಅಲ್ಲಿನ ರೆಸಿಡೆಂಟರನ್ನು ಸಂದರ್ಶಿಸುವಂತಾಯಿತು. ಆ ವೇಳೆ ಏಳನೇ ಎಡ್ವರ್ಡ್ ಚಕ್ರವರ್ತಿಗಳು ಬಂದಿದ್ದ ಸಂದರ್ಭ. ಚಕ್ರವರ್ತಿಗಳಿಗೆ ಕಾಣಿಕೆಯಾಗಿ ಅಪರೂಪದ ಕೃತಿಗಳನ್ನು ಚಿನ್ನಾಚಾರ್ಯರಿಂದ ಮಾಡಿಸಿ ಕೊಡಲು ಅವಕಾಶ ಕೊಟ್ಟು ಮೈಸೂರಿನ 'ಶಿಲ್ಪಕಲೆಗೆ' ಕೀರ್ತಿ ತಂದುಕೊಟ್ಟರು. ಅವು ಮೂರು ಅಡಿ ಎತ್ತರದಲ್ಲಿ ಟೆನ್ನಿಸ್ ರೂಪಶ್ರೀಯರ (ಒಂದು ಜೊತೆ) ಪ್ಲಾಸ್ಟರ್ ಕೃತಿಗಳು, ಕೇವಲ ಅಲ್ಪ ಅವಧಿಯಲ್ಲೇ ಅವುಗಳನ್ನು ರಚಿಸಿಕೊಟ್ಟಿದ್ದರು. ಚಕ್ರವರ್ತಿಗಳು ಆ ಕೃತಿಗಳ ಸೊಬಗಿಗೆ ಮನಸೋತು ಚಿನ್ನಾಚಾರ್ಯರನ್ನು ಅಭಿನಂದಿಸಿದರು. ಅವರ ಹೃದಯ ತುಂಬಿ ಬಂದು **"The plaques have executed with Considerable artistic care they have been generally admired"** ಎಂದು ಪ್ರಶಂಸೆ ಮಾಡಿದ್ದಾರೆ. ಇಷ್ಟೇ ಅಲ್ಲದೆ ಸಿಕಂದರಾಬಾದಿನ ಕೋಟ್ಯಧೀಶ್ವರರಾದ ಶ್ರೀ ಮುತ್ಯಾಲ ರಾಮಣ್ಣನವರ ಪ್ರತಿಮೆಯನ್ನು ಪಂಚಲೋಹದಲ್ಲಿ ನಿರ್ಮಿಸುವ ಸಾಹಸದಲ್ಲಿ ಚಿನ್ನಾಚಾರ್ಯರು ಜಯಗಳಿಸಿದರು. ತೈಲಚಿತ್ರದಲ್ಲೂ ಸರಿಬಾರದಷ್ಟು ಸೌಂದರ್ಯವೂ ಜೀವಕಳೆಯೂ ಈ ಪ್ರತಿಮೆಯಲ್ಲಿ ಕಾಣುವಂತಾಯಿತು. ಇದರಿಂದಾಗಿ ಆಚಾರ್ಯರ ಕೀರ್ತಿ ಇನ್ನೂ ಹೆಚ್ಚಾಯಿತು. ನಂತರದಲ್ಲಿ ಸಿಕಂದರಾಬಾದಿನಿಂದ ಮೈಸೂರಿಗೆ ಆಗಮಿಸಿದರು.



ಮುತ್ಯಾಲ ರಾಮಣ್ಣ

ಚಿನ್ನಾಚಾರ್ಯರಿಗೆ ಲೋಹದಂಥ ಗಟ್ಟಿಮುಟ್ಟಿನ ಶರೀರವೇ ಇತ್ತು. ಅವರು ಆಚಾರವಂತರು ಮತ್ತು ಖಂಡಿತವಾದಿಗಳು. ಕಲೆಯ ಹೆಸರಿನಲ್ಲಿ ಅನ್ಯಾಯವಾದರೆ ಸಹಿಸುತ್ತಿರಲಿಲ್ಲ. ಒಮ್ಮೆ ಚಾಣಗಳನ್ನು ಹಿಡಿದು ನೆಟ್ಟ ಮನಸ್ಸಿನಿಂದ ಶಿಲ್ಪರಚನೆಯಲ್ಲಿ ಧ್ಯಾನಾಸಕ್ತರಾಗಿದ್ದಾಗ ಯಾರಾದರೂ ಅಡ್ಡಿಪಡಿಸಿದರೆ ತಕ್ಷಣ ಕೋಪಗೊಳ್ಳುತ್ತಿದ್ದರು. ಕೋಪ ಬಂದರು ಅದು ತಕ್ಷಣ ಮಾತ್ರ, ಮರುಕ್ಷಣದಲ್ಲಿ ಮೊದಲಿನಂತೆ ಸಾವಧಾನದಿಂದ ಬಂದಿದ್ದವರನ್ನು ಮಾತನಾಡಿಸುತ್ತಿದ್ದರು.

ಶಿಲ್ಪ ಕಲೆಯಲ್ಲಿ ಪರಿಣಿತರಾದ ಶ್ರೀ ಚಿನ್ನಾಚಾರ್ಯರು ತಮ್ಮ ಜೀವನವನ್ನು ಹೆಚ್ಚು ಹೆಚ್ಚು ಸುಧಾರಿಸಿಕೊಳ್ಳಲು ಉದ್ಯುಕ್ತರಾದರು. ಧರ್ಮದಿಂದಲೇ ಸ್ಫೂರ್ತಿಗೊಂಡ ಇವರ ವಂಶ ಶ್ರೀಯುತರನ್ನು ಧರ್ಮದ ದಾರಿಯಿಂದಲೇ ಕಲೆ ನಡೆಸಬೇಕು. ಕಲೆ ಧರ್ಮದ ಛಾಯಾನುವರ್ತಿಯಾಗಿರಬೇಕು ಎಂಬ ನಿರ್ಧಾರದೊಂದಿಗೆ ಸತತವಾಗಿ ಶಾಸ್ತ್ರೀಯ ಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡಿ ಶಿಲ್ಪಶಾಸ್ತ್ರ ಪ್ರವೀಣರಾದರು.

"ಹುಟ್ಟಿದೊಡನೆ ಬಂದ ಪ್ರತಿಭೆ, ಕೆಸರಿಲ್ಲದ ತಿಳಿವು, ಬೆಸರವಿಲ್ಲದ ಕಲಿವು ಇದ್ದವರಿಗೆ ಸರಸ್ವತಿಯು ಒಲಿಯುವಳು" ಎಂಬ ಹಿರಿಯೋಕ್ತಿಯು ಚಿನ್ನಾಚಾರ್ಯರ ಜೀವನಕ್ಕೆ ಒಪ್ಪುತ್ತಿತ್ತು. ಯಾವೊಬ್ಬನ ಕಲಾವಿದನ ಕೃತಿಯಲ್ಲಿ ರೂಪ, ರೇಖಾ, ಪ್ರಮಾಣ, ವರ್ಣಗಳಲ್ಲಿ ಎಷ್ಟೇ ಹೊಂದಿಕೆಯಿದ್ದರೂ ಅವನ ಕೃತಿಗಳಲ್ಲಿ ಜೀವಕಳೆ ಇಲ್ಲದಿದ್ದರೆ ಉತ್ತಮ ಕೃತಿಯಾಗದು. ಅವನ ಪಾಂಡಿತ್ಯವು ಕೃತಿಯಲ್ಲಿ ತೋರುವ ಜೀವಂತ ಶಕ್ತಿಯಿಂದಲೇ ಸ್ಪಷ್ಟವಾಗಬೇಕು. ಈ ಫಲ ದೊರೆಯಲು ಅಮೋಘ ಅಭ್ಯಾಸ, ಅಪಾರ ಅನುಭವ ಅಗತ್ಯ. ತನ್ನ ಸಾಮಗ್ರಿಗಳು ಜೀವಾಣುಗಳೆಂದು ತಿಳಿದು ಎಚ್ಚರಿಕೆಯಿಂದ ರೂಪುಗೊಳಿಸಿ ಜೀವಂತ ದೃಶ್ಯಗಳನ್ನಾಗಿ ಸೃಷ್ಟಿಸುವವನು ನಿಜವಾದ ಕಲಾವಿದ. ಆಗ ಅವನ ಕೃತಿಗಳು ಉಸಿರಾಡುತ್ತಾ ಮಾತನಾಡುತ್ತಾ ಜೀವಂತವಾಗಿರುತ್ತವೆ. ಇಂಥ ಶಾಸ್ತ್ರಪೂರ್ಣ ಜೀವಂತ ಕಲಾಮೂರ್ತಿಗಳನ್ನು ಚಿನ್ನಾಚಾರ್ಯರಿಂದ ನಾವು ಪಡೆದಿದ್ದೇವೆ. ಅವುಗಳಲ್ಲಿ ಒಂದು ಭಕ್ತಿಮಯವಾಗಿ ಕೈಜೋಡಿಸಿ ನಿಂತಿರುವ ಗಂಭೀರ ಮುದ್ರೆ. ಶ್ರೀಮನ್ ನಾಲ್ವಡಿ ಕೃಷ್ಣರಾಜ ಒಡೆಯರರ ಎರಡುವರೆ ಅಡಿ ಎತ್ತರದ ಪ್ರತಿಮೆಯನ್ನು ಪಂಚಲೋಹದಲ್ಲಿ ಕಡೆದವರೂ ಚಿನ್ನಾಚಾರ್ಯರೇ, ಇದು ಸಾವಿರಾರು ಜನ ಯಾತ್ರಿಕರ ಗಮನ ಸೆಳೆಯುತ್ತಿದೆ. (ಚಿತ್ರ 8)

ಭಾರತದ ರಾಜಾಸ್ಥಾನದಲ್ಲಿ ಇರುವ **ಭರತಪುರದ ಅರಮನೆಯಲ್ಲಿ** ಇವರು ರಚಿಸಿಕೊಟ್ಟ **'ಮಹಿಷಾಸುರ ಮರ್ಧಿನಿ'** ವಿಗ್ರಹವು (ಮುಖಪುಟ) ಈಗಲೂ ರಾರಾಜಿಸುತ್ತಿದೆ. ಚಿನ್ನಾಚಾರ್ಯರು ನಿರ್ಮಿಸಿದ ಅನೇಕ ಮೂರ್ತಿಗಳಿಗೆ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಬಹುಮಾನಗಳು ಬಂದಿವೆ. 1957ರಲ್ಲಿ ರಚಿಸಿದ 'ಶ್ರೀನಿವಾಸ' ಬೆಳ್ಳಿಯ ವಿಗ್ರಹ ಮತ್ತು ಅಪ್ರತಿಮ ಕೆತ್ತನೆ ಕೆಲಸದಿಂದ ಕೂಡಿರುವ ಬಾಗಿಲವಾಡಕ್ಕೆ ಶ್ರೀ ಮಧ್ವರಾಜರ ಬಹುಮಾನ ದೊರಕಿತು. ಶ್ರೀ ಕೂಡಲಿಮಠದಲ್ಲಿ ಚಿನ್ನಾಚಾರ್ಯರು ನಿರ್ಮಿಸಿದ ಬೆಳ್ಳಿಪಲ್ಲಕ್ಕಿ ಅಜರಾಮರವಾಗಿ ಬೆಳಗುತ್ತಿದೆ.


ಚಿನ್ನಾಚಾರ್ಯರ ಕಲಾಕುಶಲತೆಯ ಗುಟ್ಟನ್ನರಿತ C.T.I ಮುಖ್ಯ ಅಧಿಕಾರಿಯಾಗಿದ್ದ ಡಿ.ಎಸ್. ರಾಮಸ್ವಾಮಿ ಅಯ್ಯಂಗಾರ್ ಹಾಗೂ ಆಗ ದಿವಾನರಾಗಿದ್ದ ಮಿರ್ಜಾರವರ ಬೆಂಬಲವಾಗಿ ನಿಂತು ಅಣ್ಣಾಮಲೈ ವಿಶ್ವವಿದ್ಯಾನಿಲಯಕ್ಕೆ ಬೇಕಾಗಿದ್ದ ಪಂಚಲೋಹದ ನಟರಾಜ (6 ಅಡಿ ಎತ್ತರ) ಮತ್ತು ಗೋವಿಂದರಾಜ (ಅಗಲ 5 ಅಡಿ) ವಿಗ್ರಹಗಳನ್ನು ಅಂದಿನ ಉಪಕುಲಪತಿಗಳಾಗಿದ್ದ **ರೈಟ್ ಆನರಬಲ್** ವಿ. ಎಸ್. **ಶ್ರೀನಿವಾಸ ಶಾಸ್ತ್ರಿಗಳಿಗೆ**

(ಬ್ರಿಟೀಷ್ ಸರಕಾರದವರು ಇವರಿಗೆ ಕೊಟ್ಟ Right ಮತ್ತು Silvar Tongue of the East' ಈ ಎರಡು ಬಿರುದುಗಳು. ಕಾರಣ ಅಂದಿನ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಇದ್ದ ಆಂಗ್ಲ ಭಾಷೆಯ ಐದು ವಾಗ್ಮಿಗಳಲ್ಲಿ ಇವರು ಒಬ್ಬರಾಗಿದ್ದರು.) ಡಿ.ಎಸ್. ರಾಮಸ್ವಾಮಿ ಅಯ್ಯಂಗಾರರಿಗೆ ಶಿಲ್ಪಿ ಚಿನ್ನಾಚಾರ್ಯರ ಶಿಲ್ಪ ಕಲೆಯ ಪ್ರಬುದ್ಧತೆಯನ್ನು ಅವರ ಗಮನಕ್ಕೆ ತಂದು ವಿಗ್ರಹಗಳನ್ನು ನಿರ್ಮಿಸಲು ಆದೇಶವನ್ನು ಒದಗಿಸಿಕೊಟ್ಟರು.

ವಿಗ್ರಹಗಳು ಸಂಪೂರ್ಣಗೊಂಡ ಮೇಲೆ ವಿಷಯವನ್ನು ಉಪಕುಲಪತಿಗಳಿಗೆ ತಿಳಿಸಿದರು, ಅವರು ತತ್‌ಕ್ಷಣ ಸಿ.ಟಿ.ಐ ಬರುವ ದಿನಾಂಕವನ್ನು ತಿಳಿಸಿದರು (9.11.1939), ಮುಖ್ಯ ಅಧಿಕಾರಿಯ ಜೊತೆಗೆ ಇಡೀ ಶಾಲೆಯವರು ಅವರನ್ನು ಸ್ವಾಗತಿಸಿದರು. ಉಪಕುಲಪತಿ ವಿಗ್ರಹಗಳನ್ನು ನೋಡಿ ಮಾತನಾಡದೆ ಕೆಲವು ಸೆಕೆಂಡುಗಳು ಮಂತ್ರಮುಗ್ಧರಾಗಿ ನಿಂತಿದ್ದರು. ಚಿನ್ನಾಚಾರ್ಯರು ಅವರ ಮುಖದಲ್ಲಿ ಆನಂದಭಾಷ್ಪ ಗಮನಿಸಿದರು. ಚಿನ್ನಾಚಾರ್ಯರನ್ನು ನೋಡಿ ಕೈಜೋಡಿಸಿ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ತತ್‌ಕ್ಷಣ ಚಿನ್ನಾಚಾರ್ಯರು ತಲೆಬಾಗಿ ನಮಸ್ಕರಿಸಿದರು. ವಿಶ್ವವಿದ್ಯಾನಿಲಯಕ್ಕೆ ಮರಳಿದ ನಂತರ ಚಿನ್ನಾಚಾರ್ಯರಿಗೆ ಒಂದು ಖುದ್ದು ಪತ್ರವನ್ನು ಬರೆದಿದ್ದರು. ಆ ಪತ್ರ ಮತ್ತು ಅವರ ಫೋಟೊ. (ಪುಟ 27)

ಉಪಕುಲಪತಿಗಳು ಚಿನ್ನಾಚಾರ್ಯರನ್ನು ಉದ್ಘಾಟನಾ ಸಮಾರಂಭಕ್ಕೆ ಆಹ್ವಾನಿಸಿ ಅಂದಿನ ಮದರಾಸು ಗವರ್ನರ್ E.F.L. Wood ರವರ ಅಮೃತ ಹಸ್ತದಿಂದ ತುಂಬಿದ ಸಭೆಯಲ್ಲಿ ಜರತಾರಿ ಪೀತಾಂಬರ ಬಹುಮಾನದೊಡನೆ **"ಶ್ರೀ ವಿಶ್ವಕರ್ಮ ಶಿಲ್ಪಕಲಾನಿಧಿ"** ಎಂಬ ಬಿರುದನ್ನು ಕೊಡಿಸಿ ಸತ್ಕರಿಸಿದರು. ಶ್ರೀಯುತರ ಬಗ್ಗೆ ಅವರ ಶಿಲ್ಪಕಲೆಯ ಬಗ್ಗೆ ತಮಿಳುನಾಡಿನ ಪತ್ರಿಕೆಗಳೆಲ್ಲ ವಿಗ್ರಹಗಳೊಂದಿಗೆ ಚಿನ್ನಾಚಾರ್ಯರ ಕಲಾ ವಿದ್ವತ್ತನ್ನೂ ಅಖಂಡ ಜನಸ್ತೋಮಕ್ಕೆ ಪ್ರಚುರಪಡಿಸಿದವು. ಈ ಎರಡು ವಿಗ್ರಹಗಳು ನಟರಾಜ ಮತ್ತು ಗೋವಿಂದರಾಜ "ಶಾಸ್ತ್ರಿ ಹಾಲ್"ನ ವೇದಿಕೆಯ ಎಡ ಮತ್ತು ಬಲಭಾಗದಲ್ಲಿ ಸ್ಥಾಪಿಸಲಾಗಿದೆ (ಚಿತ್ರ 8). ಪದವಿ ಪ್ರದಾನ ಸಮಾರಂಭದ ಈ ಹಾಲಿಗೆ ಉಪಕುಲಪತಿಗಳಾಗಿದ್ದ ಶ್ರೀಮಾನ್ ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳ ಹೆಸರನ್ನು ಇಡಲಾಗಿದೆ. ಗಮನಿಸಿ ಎಡಭಾಗದಲ್ಲಿ ಗೋವಿಂದರಾಜ ವಿಗ್ರಹ ಬಲ ಭಾಗದಲ್ಲಿ ನಟರಾಜ ವಿಗ್ರಹಗಳನ್ನು ಸ್ಥಾಪಿಸಿರುತ್ತಾರೆ.





11 Nov 1939

Dear Shilpin Chinnachar,

You remember I was not

[redacted]

My heart was full of ap-
preciation and my tongue
was active in expression.
Not content with it, [redacted]
I belauded your work in

[redacted]

and to the Superintendent
of the Institute. One or
both should be glad to
give you a copy of the re-
marks that concern you.
That's the regular thing.

[redacted]

your official superiors.

Yours sincerely
V. S. Srinivasa Sastri

[redacted]

[redacted]

ರೈಟ್ ಆನರಬಲ್
ವಿ.ಎಸ್. ಶ್ರೀನಿವಾಸಶಾಸ್ತ್ರಿ
(1869 - 1946)

Annamalai University
Annamalainagar,
Date: 11-11-1939

Dear Shilpin Chinnachar,

You remember I was not miserly praise of you, My heart was full of appreciation and my tongue was active in expression.

Not content with it, I belauded your work in writing both the Deavan and to the Superintendent of the Institute. One or both should be glad to give you a copy of the remarks that concern you. That is the regular thing, my testimony should go through your official superiors.

Yours sincerely
V. S. Srinivasa Sastri
(signed)

Former Vice Chancellor,
Annamalai University,
Chidambaram,
TAMILNADU

ನಟರಾಜ ವಿಗ್ರಹ (ಎತ್ತರ ೬ ಅಡಿ)

ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಪಂಚಲೋಹದ ಉತ್ಸವಮೂರ್ತಿಗಳು ಸುಮಾರು ಒಂದರಿಂದ ಒಂದುವರೆ ಅಡಿ ಎತ್ತರ ಇರುವುದು ಸರ್ವೇಸಾಮಾನ್ಯ. ಆದರೆ ಈ ಪಂಚಲೋಹದ 6 ಅಡಿ ಎತ್ತರ ನಟರಾಜನ ವಿಗ್ರಹವನ್ನು ನಿರ್ಮಿಸಿರುವುದು ಒಂದು ಸೋಜಿಗ. ಕಾರಣ, ಇದು ಸುಮಾರು 80 ವರ್ಷಗಳ ಹಿಂದಿನ ಸಾಂಪ್ರದಾಯಿಕ ಪದ್ಧತಿಯಂತೆ ಎರಕ ಹೊಯ್ದಿರುವುದು ಒಂದು ಅಚ್ಚರಿಯ ಕೆಲಸ, ಆಗ ಈಗಿನ ಹಾಗೆ ತಂತ್ರಜ್ಞಾನದ ಅರಿವು ಇರಲಿಲ್ಲ. ಎಷ್ಟು ಎಷ್ಟು ದೊಡ್ಡ ಮೂಸೆಗಳನ್ನು ಬಳಸಿದ್ದರು, ಏನೇ ಆಗಲಿ ಮೇಣದ ಆಕಾರದಲ್ಲಿ ಇದ್ದ ಮೂರ್ತಿಯ ಪ್ರತಿಯೊಂದು ಭಾಗಕ್ಕೂ ಕರಿಗಿದ ಪಂಚಲೋಹ ($1200^{O}C$ ತಾಪಮಾನ) ಹರಿದಿರುವುದು ದೇವರ ಕೃಪೆ. ಹಾಗೆಯೇ ಗೋವಿಂದರಾಜ ವಿಗ್ರಹವು ಕೂಡ.

ಗಮನಿಸಬೇಕಾಗಿರುವುದು ನಟರಾಜನ ನಾಟ್ಯಭಂಗಿ, ಹಸ್ತ ಪಾದಗಳ ವಿನ್ಯಾಸ, ಬೆರಳುಗಳಿಗೆ ಜೀವ ತುಂಬಿರುವುದು, ಬಲಗೈಯಲ್ಲಿ ಡಮರುಗ, ಎಡಗೈಯಲ್ಲಿ ಜ್ವಾಲೆಯನ್ನು ಕಲಾತ್ಮಕವಾಗಿ ಇರುವುದು, ದೇಹದ ಭಾರ ತನ್ನ ಎಡ ಪಾದದಲ್ಲಿ ಮಹಿಷಾಸುರನ ಮೇಲೆ ಇಟ್ಟಿರುವುದನ್ನು ಗಮನಿಸಿ, ಎಷ್ಟು ಸ್ವಾಭಾವಿಕವಾಗಿರುವುದು. ಮಹಿಷಾಸುರ ಕೈಯಲ್ಲಿರುವ ಸರ್ಪದಲ್ಲಿ ಜೀವ ಎದ್ದು ಕಾಣುತ್ತದೆ, ಇಬ್ಬಾಗದಲ್ಲಿರುವ ಸಿಂಹಗಳು ನಿಂತಿರುವ ಭಂಗಿ ಅದಕ್ಕೆ ತುಂಬಿರುವ ಜೀವ, ನಟರಾಜನ ಮುಖದಲ್ಲಿ ಕಂಡುಬರುವ ಪ್ರಸನ್ನತೆ ಇತ್ಯಾದಿ. (ಚಿತ್ರ 9)

ಗೋವಿಂದರಾಜ ವಿಗ್ರಹ

(ಎತ್ತರ 4 ಅಡಿ, ಅಗಲ 5 ಅಡಿ)

ಸಪ್ತಶಿರಯುಳ್ಳ ಸರ್ಪದ ಪಲಂಗದ ಮೇಲೆ ಮಲಗಿರುವ ಗೋವಿಂದರಾಜ, ನಾಭಿಯಿಂದ ಬಂದಿರುವ ಕಮಲದ ಮೇಲೆ ನಿಂತಿರುವ ಬ್ರಹ್ಮ, ಪಾದದ ಬಳಿ ಶ್ರದ್ಧೆಯಿಂದ ಕುಂತಿರುವ ಶ್ರೀದೇವಿ, ಭೂದೇವಿ ಹಾಗೂ ಗೋವಿಂದರಾಜನ ಮುಖವನ್ನು ಗಮನಿಸಿ, ಸಾಕ್ಷಾತ್ ದೇವರನ್ನೇ ನೋಡಿದ ಅನುಭವವಾಗುತ್ತದೆ. (ಚಿತ್ರ 10)

ಉಪಕುಲಪತಿಗಳಾಗಿದ್ದ ಅಂತ ಮಹಾನ್ ಮೇಧಾವಿ ಶ್ರೀನಿವಾಸಶಾಸ್ತ್ರಿಗಳು ತಮ್ಮ ಕೈಬರಹದಲ್ಲಿ ಬರೆದಿರುವ ಪತ್ರದ ಒಂದೆರಡು ಸಾಲುಗಳಲ್ಲಿ ಅವರಿಗಿದ್ದ ಆಳವಾದ ಶಿಲ್ಪಕಲಾ ಜ್ಞಾನವನ್ನು ಸೂಚಿಸುತ್ತದೆ.

ಒಮ್ಮೆ ಪ್ರೊ. ಕೆ.ವಿ. ಐಯ್ಯರ್‌ರವರು ಮದ್ರಾಸ್ ಪ್ರಾಂತ್ಯದ ಪ್ರವಾಸದಲ್ಲಿದ್ದಾಗ (ಈಗಿನ ತಮಿಳುನಾಡು) ಅಣ್ಣಾಮಲೈ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ಸಂದರ್ಭ ಒದಗಿತ್ತು. ಆಗ ಅಲ್ಲಿನ **"ಶಾಸ್ತ್ರಿ ಹಾಲ್"**ನ ಆವರಣದಲ್ಲಿ ಸ್ಥಾಪಿಸಿರುವ ನಟರಾಜ ಮತ್ತು ಗೋವಿಂದರಾಜ ಕಂಚಿನ ಲೋಹದ ಮೂರ್ತಿಗಳನ್ನು ಕಂಡು ವಿಗ್ರಹ ರಚನಾಕಾರರ ಶಿಲ್ಪ ಕಲಾನೈಪುಣ್ಯತೆಯನ್ನು ಮನಸಾರೆ ಮೆಚ್ಚಿ ಶಿಲ್ಪಿಯ ಮಾಹಿತಿಯನ್ನು ಪಡೆದುಕೊಂಡರು. ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್‌ನಲ್ಲಿ ಬಂದು "ಆಚಾರ್ಯರೇ ನಾನು ಶಾಂತಲಾ ಎಂಬ ಕಾದಂಬರಿ ಬರೆಯುತ್ತಿದ್ದೇನೆ, ಪುಸ್ತಕದ ಮುಖಪುಟಕ್ಕೆ ಅವಶ್ಯವಾದ ಒಂದು ನಾಟ್ಯಸರಸ್ವತಿಯ ಚಿತ್ರ ಬೇಕಾಗಿದೆ, ತಾವು ಕಂಚು ಲೋಹದಲ್ಲಿ ನಾಟ್ಯಸರಸ್ವತಿಯ ವಿಗ್ರಹ ತಯಾರಿಸಿ ಕೊಡುತ್ತೀರಾ" ಎಂದು ಮನವಿ ಮಾಡಿದರು. ಚಿಕ್ಕಣ್ಣಾಚಾರ್ಯರು ತತ್‌ಕ್ಷಣ ವಿನಯಪೂರ್ವಕವಾಗಿ ಒಪ್ಪಿಕೊಂಡು ವಿಗ್ರಹವನ್ನು ನಿರ್ಮಿಸಿಕೊಟ್ಟರು. ಕೆ. ವಿ. ಐಯ್ಯರ್‌ರವರು ಮೂರ್ತಿಯನ್ನು ನೋಡಿ ಮಂತ್ರಮುಗ್ಧರಾಗಿ ಎರಡು ಮಾತಿಲ್ಲದೆ, ಆ ನಾಟ್ಯಸರಸ್ವತಿಯ ಕಂಚಿನ ಶಿಲ್ಪದ ಚಿತ್ರವನ್ನೇ ಅವರ **'ಶಾಂತಲಾ'** ಕಾದಂಬರಿಯ ಮುಖಪುಟದಲ್ಲಿ ಮುದ್ರಿಸಿರುವುದನ್ನು ಕಾಣಬಹುದಾಗಿದೆ. (ಚಿತ್ರ 11)

ಮೈಸೂರು ಮಹಾರಾಜರ ಆಡಳಿತದಿಂದ ಪ್ರತಿವರ್ಷ ನಡೆಸುತ್ತಿದ್ದ ದಸರಾ ವಸ್ತು ಪ್ರದರ್ಶನದಲ್ಲಿ, ಚಿನ್ನಾಚಾರ್ಯರ ಕೃತಿ ಇದ್ದರೆ ಬಹುಮಾನವು ಖಚಿತವಾಗಿತ್ತು. ಎಷ್ಟೋ ಬಹುಮಾನಗಳನ್ನು ಗಳಿಸಿದ್ದಾರೆ. ಅವರ ಮನೆಯಲ್ಲಿ ನಾನೇ ಸರ್ಟಿಫಿಕೇಟ್‌ಗಳನ್ನು ಖುದ್ದಾಗಿ ನೋಡಿದ್ದೇನೆ. ನನಗೆ ಚಿಕ್ಕ ವಯಸ್ಸು (ಮಿಡಲ್ ಸ್ಕೂಲು ವಿದ್ಯಾರ್ಥಿ) ತಿಳುವಳಿಕೆ ಇರಲಿಲ್ಲ ಅವುಗಳನ್ನು ಸಂರಕ್ಷಿಬಹುದಾಗಿತ್ತು.

1950ರಲ್ಲಿ ವಸ್ತುಪ್ರದರ್ಶನಕ್ಕೆ ಇಟ್ಟಿದ್ದ ಗಣೇಶ ಮೂರ್ತಿ ವಿಗ್ರಹ ಮತ್ತು ಅದಕ್ಕೆ ದೊರಕಿದ ಪದಕದ ಫೋಟೋಗಳು. (ಚಿತ್ರ 13)

ಪ್ರಥಮ ಬಾರಿಗೆ ಬೆಂಗಳೂರಿನಲ್ಲಿ ಸ್ಥಾಪಿತವಾದ All India Handicraft Board (Design Centre) GOVT. OF INDIA (Brigade Road Cross -Charch Street) Bangalore ಈ ಕೇಂದ್ರದವರು ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕಲಾ ವಿದ್ವತ್ತನ್ನು ಮನಗೊಂಡು ಅಂದಿನ ಡೈರೆಕ್ಟರಾಗಿದ್ದ ಶ್ರೀ ಅಸಿತಕುಮಾರ್ ಅಲ್ದಾರ್ ಚಿನ್ನಾಚಾರ್ಯರನ್ನು ಲೋಹ ವಿಭಾಗದ ಮುಖ್ಯಸ್ತರಾಗಿ ಪ್ರಥಮ ಬಾರಿಗೆ ಸೇರಿಸಿಕೊಂಡರು. (1.12.1953) ಡೈರೆಕ್ಟರಿಗೂ ಶ್ರೀಯುತರಿಗೂ ಮೊದ ಮೊದಲು

ವಿಶ್ವಾಸ, ಮೈತ್ರಿಭಾವ ಇತ್ತಾದರೂ ಯಾವುದೋ ಕಾರಣಕ್ಕೆ ಹಟವಾದಿ ಶ್ರೀಯುತರು ರಾಜೀನಾಮೆ ಸಲ್ಲಿಸಿದರು. ಇಲ್ಲಿ ಇವರು ಕೇವಲ ಹದಿನಾಲ್ಕು ತಿಂಗಳು ಮಾತ್ರ ಕೆಲಸದಲ್ಲಿ ಇದ್ದುದ್ದು. ಈ ಅವಧಿಯಲ್ಲಿಯೇ ಒಂದು ಅದ್ಭುತವಾದ ಶಿಲ್ಪಕಲಾಕೃತಿ 'ಶ್ರೀ ಗಣೇಶಮೂರ್ತಿ'ಯನ್ನು ನಿರ್ಮಿಸಿದ್ದರು. (ಚಿತ್ರ 15) ಆ ವರ್ಷ ನ್ಯಾಷನಲ್ ಅವಾರ್ಡ್‌ಗೆ ಯೋಗ್ಯವಾದ ಕೃತಿಯಾಗಿತ್ತು. ಗ್ರೀಸ್ ದೇಶದ ಒಬ್ಬನಾದ ಶ್ರೇಷ್ಠ ವೇದಾಂತಿ ಸಿಸಿರೊ ಹೇಳುತ್ತಾನೆ 'It is not your wisdom, it is your fortune that rules man's life' ಸುಲಭವಾಗಿ ಹೇಳುವುದಾದರೆ ವಿದ್ವತ್ ಜೊತೆಗೆ ಅದೃಷ್ಟವು ಇರಬೇಕು. ಶ್ರೀಯುತರ ರಾಜೀನಾಮೆ ಕೊಟ್ಟಿದ್ದೇ ಅವರಿಗೆ ಮುಳುವಾಯಿತು. ಆದರೂ, ತಮ್ಮ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಶಿಷ್ಯ ಶಿವಯ್ಯನಿಗೆ ಜೀವನಕ್ಕೆ ತೊಂದರೆಯಾಗದಿರಲು, ಅಲ್ಲಿಯೇ ಕೆಲಸ ಮಾಡಲು ಬುದ್ಧಿವಾದ ಹೇಳಿದರು, ಅಲ್ಲಿಯೇ ಕೆಲಸವನ್ನು ಮುಂದುವರೆಸಿ ನಿವೃತ್ತನಾಗಿರುತ್ತಾನೆ.

ನಂತರ ನಮ್ಮ ಸಂಬಂಧಿಕರಾದ ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯರು ಮತ್ತು ಶಿಲ್ಪಿ ಎನ್.ಜಿ. ನೀಲಕಂಠಾಚಾರ್ಯರುಗಳು ಅಲ್ಲಿ ಕೆಲಸಕ್ಕೆ ಸೇರಿಕೊಂಡರು.

ಅಮೇರಿಕಾ ದೇಶದ ಒಂದು ಪ್ರತಿಷ್ಠಿತ ಮ್ಯಾಗಜೀನ್ 'Spectator' ಒಬ್ಬ ವಿಮರ್ಶಕ ಡಿಸೈನ್ ಸೆಂಟರಿಗೆ ಬಂದು ಈ ಗಣೇಶಮೂರ್ತಿಯನ್ನು ನೋಡಿ ದಿಗ್ಭ್ರಮೆಗೊಂಡನಾಗಿ ಜುಲೈ 1956ರ 'Spectator' ಮ್ಯಾಗಜೀನ್‌ನಲ್ಲಿ ಹೀಗೆ ಬರೆದಿರುತ್ತಾರೆ.

"A master carver in any median he can recreate the marvels of Belur and Halebeedu on Bronze. Mr Chinnachar has to his credit a record of work that any astisan could well be proud of" ಶ್ರೀ ಪಿ.ಆರ್. ತಿಪ್ಪೇಸ್ವಾಮಿಯವರು ಈ ಪುಸ್ತಕ ತೋರಿಸಿ ಕನ್ನಡದಲ್ಲಿ ಅದರ ಅರ್ಥ ವಿವರಿಸಿದಾಗ ಚಿನ್ನಾಚಾರ್ಯರ ಮುಖದಲ್ಲಿ ಕೊರಗಿನ ಕಂಬನಿ ಕಂಡು ನಾನು ಮೂಕನಾದೆ. ಆದರೆ ಆಚಾರ್ಯರು ಸಮಾಧಾನವಾಗಿ ಈ ಪುಸ್ತಕವು ನನಗೆ ನೆಮ್ಮದಿ ತಂದುಕೊಟ್ಟಿತು ಅಂದಮೇಲೆ ನನಗೂ ಕೂಡ ಸಮಾಧಾನವಾಯಿತು.

ಬೆಂಗಳೂರಿನಿಂದ ಮೈಸೂರಿಗೆ ಹಿಂತಿರುಗಿದ ಮೇಲೆ ತಮ್ಮ ಶಿಲ್ಪಿ ಎನ್.ವಿ. ಸೂರ್ಯನಾರಾಯಣಚಾರ್ಯರಿಗೆ ಬಹು ಬೇಡಿಕೆಗಳಿದ್ದ ಬೆಳ್ಳಿಯ ದೇವರ ಮನೆಗೆ ಬೇಕಾದ ಪೂಜಾ ವಿಗ್ರಹಗಳು ಇತ್ಯಾದಿಗಳಿಗೆ ಮಾಡಲು ಬೇಕಾಗಿದ್ದ ಮೇಣದ ಮೂರ್ತಿಗಳನ್ನು ರಚಿಸಿಕೊಟ್ಟು ಸಂಭಾವನೆ ಪಡೆದು ಜೀವನ ಸಾಗಿಸುತ್ತಿದ್ದರು.

Mysore State awards for Master Craftsmen, Karnataka 1969ರಲ್ಲಿ ನಮ್ಮ ಅಂದಿನ ಘನ ಸರ್ಕಾರವು ಪ್ರಪ್ರಥಮ ಬಾರಿಗೆ ಕರ್ನಾಟಕದ ಶ್ರೇಷ್ಠ

ಕಲಾವಿದರುಗಳಿಗೆ ಪ್ರಶಸ್ತಿಯನ್ನು ಕೊಡಲು ತೀರ್ಮಾನಿಸಿತು. ಪ್ರಶಸ್ತಿಗಳನ್ನು ಎರಡು ವಿಭಾಗ ಮಾಡಿದರು. ಒಂದು 'State Award' ಇನ್ನೊಂದು 'Certificate of Merit' ಎಂದು ಗುರುತಿಸಲಾಯ್ತು. ಸ್ಥಾಪನೆಯಾದ ಮೊದಲ ಬಾರಿಗೆ ಅಂದಿನ ಕರ್ನಾಟಕದ ರಾಜ್ಯಪಾಲರಾದ ಸನ್ಮಾನ್ಯ ಶ್ರೀಯುತ ಧರ್ಮವೀರರು ಪ್ರಥಮ ಬಾರಿ ತಮ್ಮ ಅಮೃತಹಸ್ತದಿಂದ ಪ್ರಶಸ್ತಿಯನ್ನು ವಿತರಣೆ ಮಾಡಿದರು. ಶಿಲ್ಪಕಲಾನಿಧಿ ಎನ್.ವಿ. ಚಿನ್ನಾಚಾರ್ಯರವರ ಶಿಲ್ಪ ಕಲಾಸೇವೆಯನ್ನು ಸರ್ಕಾರವು ಗಮನಿಸಿ ಇವರಿಗೆ ಪ್ರಪ್ರಥಮ ಬಾರಿಯ 'State Award'ನ್ನು ಕೊಟ್ಟಿರುತ್ತಾರೆ. (ಚಿತ್ರ 15 ಮತ್ತು 16)

1. ತಾ. 26–11–1970 ರಂದು ಆಂದ್ರ ಪ್ರದೇಶದ 'ವಿಶ್ವಶಿಲ್ಪಿ' ಮಾಸಪತ್ರಿಕೆಯ ಮುಖಪುಟದಲ್ಲಿ ಶಿಲ್ಪ ಕಲಾನಿಧಿ ಎನ್.ವಿ. ಚಿನ್ನಾಚಾರ್ಯರ ಫೋಟೋವನ್ನು ಪ್ರಕಟಿಸಲಾಗಿದೆ. (ಚಿತ್ರ 17)
2. ಶಿಲ್ಪಿ ಎನ್.ವಿ. ಚಿನ್ನಾಚಾರ್ಯರು ಕಾರ್ಯನಿರತರಾಗಿರುವುದು ಪಕ್ಕದಲ್ಲಿ ಶ್ರೀ ಸುಬ್ರಮಣ್ಯಮೂರ್ತಿ ಪ್ರತಿಮೆಯನ್ನು ನೋಡಬಹುದು. (ಚಿತ್ರ 18)
3. ಶಿಲ್ಪಿ ಎನ್.ವಿ. ಚಿನ್ನಾಚಾರ್ಯರು ನಿವೃತ್ತಿಯ ಮೊದಲು ನಿರ್ಮಿಸಿ ಲಭ್ಯವಿರುವ ಕೆಲವು ಕೃತಿಗಳ ಫೋಟೊಗಳು. (ಚಿತ್ರ 19 ರಿಂದ 25)

ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್‌ನ ಶಿಲ್ಪ ವಿಭಾಗದ ಪ್ರಖ್ಯಾತಿಯನ್ನು ಗಮನಿಸಿ ಅಂದಿನ The Illustated Weekly of India, Dt. July 25, 1954 South Indian Bronzes ರವರು ತಮ್ಮವರೇ ಆದ ವರದಿಗಾರರು, ಫೋಟೋಗ್ರಾಫರ್‌ಗಳನ್ನು ಶಾಲೆಗೆ ಜೂನ್ 1954 ರಲ್ಲಿ ಚಿನ್ನಾಚಾರ್ಯರೊಂದಿಗೆ ಸಮಾಲೋಚನೆ ನಡೆಸಿ ತಮ್ಮ ಪತ್ರಿಕೆಯಲ್ಲಿ (ಪುಟ.48) ವರದಿ ಮಾಡಿರುತ್ತಾರೆ. ಅವರು ತೆಗೆದಿರುವ ಫೋಟೋಗಳು ಹಾಗೂ ವರದಿಯನ್ನು ಕೆಳಗೆ ಮುದ್ರಿಸಲಾಗಿದೆ.



SHILPI CHINNA CHARYA of Mysore gives the finishing touches to a bronze Nataraja. Below.



MOULDING the wax-model with clay calls for great care. After drying, the moulds are heated in a furnace, allowing the wax to melt.

It is reported that bronze replicas of the image of the dancing Shiva will in future adorn all Indian Embassies and Raj Bhavans. It is not unusual nowadays to find almost in every drawing room bronze images of the gods and goddesses of the Hindu pantheon. These, in addition to their great popularity in India, have been objects of admiration to connoisseurs of art all over the world.

The art of image-making in India, especially out of metal, originated centuries ago, when the custom of setting up the Utsava Murthi or the

processional image for the temple was first initiated. The technique has been known to our village artisans from ancient times and exquisitely designed and beautiful images belonging to different periods have been traced.

Some of the most beautiful metal images of gods and goddesses installed in many an Indian temple today have been produced by veteran craftsmen descended from a long line of hereditary artisans. They are highly skilled in their job and are able to make specimens of intricate delicacy. The idols are made according to the rules laid down in the ancient shilpasastra, the science of Indian sculpture.

Today, this age-old art, like so many other Indian handicrafts, survives only because of the determined efforts of a few master-crafts-men living in the villages of the South, although their position is far from flourishing.

One of the ways of making metalware is by casting. The metalbronze. or an alloy of five metals called panchalohamelted and poured into a mould of clay. The process of preparing the moulds is an expert's job. The first stage in casting the image is the making of the wax-model. This is a delicate piece of work. The artist keeps himself busy with the model for months, his deft fingers moulding the wax with simple tools. The surface of the model is engraved intricately according to the required design. The craftsman uses his own imagination in giving the final shape to the image and does not take the help of any drawings. Designs vary from one artist to another, but seldom do they go beyond the Traditional limits.

The finished model is carefully moulded with clay. This is an extremely difficult process, calling for great care and practice on the part of the artist. After drying the mould it is placed in a furnace for a few hours, allowing the wax to melt and come out of the mould. It is then cooled. The metal is melted and poured into the mould. It is then kept for a day allowing the metal to settle well. After it is well set, the clay mould is broken and the image removed. The superfluous material is scraped out from the surface.

The artist then gives the the image its life-lines before it is fininhed and Polished.

The bronzes illustrated here were made one of the most famous idol-makers in India, Shilpi Chinna Charya of Mysore. working as master-craftsman in the Sri Chamarajendra 'Technical institute, Mysore, he has attained a grate perfection in the art, and some of his remarkable masterpieces adorn today many museums in India. According to him





DANCING SARASWATI. Many of the finest bronzes produced in India are fashioned with simple tools.

Image-making is not yet a very profitable trade. Seldom is it possible even for an experienced artist to produce more than two or three metal images in a year. Sometimes, it is possible that a single image might take a long time to complete, if by chance the wax- model is. disfigured or the casting is found unsuccessful.

Lack of sufficient capital to get the raw matirials, the poor prices that the images fetch, and inadequate marketing facilities, are some of the chief problems that are coming in the way of these craftsmen. Despite all these obstacles, if the maker uses his imagination to produce such models as would suit modern tastes and needs, he can certainly widen his scope. Though the same forms and shapes for the images have come down from centuries, remodelling of old designs and incorporating new ideas and patterns in the technique will go a long way towards improving the lot and skill of the craftsmen.


ಎನ್.ವಿ. ಚಿನ್ನಾಚಾರ್ಯರು ತಮ್ಮ ಇಳಿವಯಸ್ಸಿನಲ್ಲಿ ನಿರ್ಮಿಸಿದ ಸುಂದರ ಮೇಣದ ಕಲಾಕೃತಿಗಳು

ತಮ್ಮ ಸಾಕು ಮಗಳು (ಅವರಿಗೆ ಸಂತಾನವಿರಲಿಲ್ಲ) ಮತ್ತು ಅಳಿಯಂದಿರ ಒಂದು ಚಿಕ್ಕ ಮನೆಯಲ್ಲಿಯೇ ಇದ್ದುಕೊಂಡು, ತಮ್ಮ ಇಳಿವಯಸ್ಸಿನಲ್ಲೂ ಶಿಲ್ಪಕಲೆಯ ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದರು. ತಮ್ಮ ಸೂರ್ಯನಾರಾಯಣಾಚಾರ್ಯರಿಗೆ ಬಿಡುವು ಇಲ್ಲದೆ ಬರುತ್ತಿದ್ದ ಆರ್ಡರ್‌ಗಳಿಗೆ ಮೇಣದ ಮೂರ್ತಿಗಳನ್ನು ರಚಿಸಿಕೊಟ್ಟು ಸಂಭಾವನೆಯನ್ನು ಪಡೆಯುತ್ತಿದ್ದರು. ಜೊತೆಗೆ ಆ ಇಳಿ ವಯಸ್ಸಿನಲ್ಲಿಯೂ ಶಿಲ್ಪಕಲೆಗೆ ಧಕ್ಕೆ ಬರದ ಹಾಗೆ ಶಾಸ್ತ್ರೀಯವಾಗಿ ಪ್ರಮಾಣಬದ್ಧವಾಗಿ ರಚಿಸಿ ಲಭ್ಯವಿರುವ ಮೇಣದ ಮೂರ್ತಿಗಳ ಫೋಟೋವನ್ನು ನೋಡಬಹುದು. (ಚಿತ್ರ 26 ರಿಂದ 34)

ಶ್ರೀಯುತ ಕಲಾವಿದ ಪಿ.ಆರ್. ಸ್ವಾಮಿಯವರು ಆಗಿಂದ್ದಾಗ್ಗೆ ಬಂದು ಕುಳಿತುಕೊಂಡು ಮಾತನಾಡುತ್ತಾ ಇವರು ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುತ್ತಿದ್ದರು. ಇವರಿಬ್ಬರಲ್ಲಿದ್ದ ಕಲಾಸೇವೆಗಿಂತ ಇವರುಗಳ ಸ್ನೇಹ ಮೆಚ್ಚುವಂತಿದೆ.

ನಾ ಕಂಡ ಹಾಗೆ 20ನೇ ಶತಮಾನದ ಕರ್ನಾಟಕ ರಾಜ್ಯದಲ್ಲಿರುವ ನಾಗಮಂಗಲ ಜಿಲ್ಲೆಯ **ಅಪ್ರತಿಮ ಲೋಹ ಶಿಲ್ಪಿ ಎಂದರೆ ಶಿಲ್ಪಿ ಎನ್.ವಿ. ಚಿನ್ನಾಚಾರ್ಯರೇ.** ಇದಕ್ಕೆ ಪೂರಕವಾಗಿ ರೈಟ್ ಆನರಬಲ್ ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳು ಅವರ ಶಿಲ್ಪಕಲೆಯನ್ನು ಮನಃಪೂರ್ವಕವಾಗಿ ಪ್ರಶಂಸಿರುವುದು (ಪುಟ 27) ಮತ್ತು ಪಿ. ಆರ್. ತಿಪ್ಪೇಸ್ವಾಮಿ, ಅಂದಿನ ಒಬ್ಬ ಶ್ರೇಷ್ಠ ಕಲಾ ವಿಮರ್ಶಕರಾಗಿದ್ದವರು ತಮ್ಮ ಐದು ಲೇಖನಗಳಲ್ಲಿ ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಶಿಲ್ಪಕಲೆಗೆ ಮನಸೋತು ಶ್ಲಾಘಿಸಿರುವುದು.

8–02–1976 ರಂದು ಚಿನ್ನಾಚಾರ್ಯರು ವಿಧಿವಶರಾದರು. ಎಂಬತ್ತೂರು ವರ್ಷಗಳ ಕಾಲ ಸಾಧಾರಣವಾಗಿ ಜೀವನವನ್ನು ಸಾಗಿಸುತ್ತಾ ಇದ್ದರು, ತಮ್ಮ ಶಿಲ್ಪ ಕಲೆಗೆ ಯಾವ ರೀತಿಯ ಧಕ್ಕೆ ಬರದಹಾಗೆ ಶಾಸ್ತ್ರೋಕ್ತವಾಗಿ ಶಿಲ್ಪ ಕೃತಿಗಳನ್ನು ರಚಿಸಿದ **ಒಬ್ಬ ಮಹಾನ್ ಕರ್ಮಯೋಗಿ.** ಇವರು ನಮ್ಮ ಕನ್ನಡ ನಾಡಿನಿಂದ ಕಣ್ಮಣಿಯಾದರೂ ಅವರು ಮಾಡಿ ಬಿಟ್ಟಿರುವ ಶಿಲ್ಪ ಕಲಾಕೃತಿಗಳು ನಮ್ಮ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಕರ್ನಾಟಕದ ಕಲಾಕೀರ್ತಿಯನ್ನು ಮೆರೆಸುತ್ತಾ ಜೀವಂತವಾಗಿ ಉಳಿದಿವೆ.



3. ಶಿಲ್ಪಿ ಎನ್.ವಿ. ಸೂರ್ಯನಾರಾಯಣಾಚಾರ್

(1898 – 1980)


ಶಿಲ್ಪಿ ಎನ್.ವಿ. ಸೂರ್ಯನಾರಾಯಣಾಚಾರ್ಯರು ಶಿಲ್ಪಕಲಾನಿಧಿ ಎನ್. ವಿ. ಚಿನ್ನಾಚಾರ್ಯರ ಸ್ವಂತ ತಮ್ಮ. ಅಣ್ಣನಂತೆ ಇವರು ಕೂಡ ಆಗಿನಕಾಲದ ಮೈಸೂರಿನ ಖ್ಯಾತ ಶಿಲ್ಪಿ ಎನ್ನಿಸಿಕೊಂಡಿದ್ದರು. ಸೂರ್ಯನಾರಾಯಣಾಚಾರ್ಯರು ಕಂಪನಿಮನೆಯ ಶ್ರೀಮಂತರಾಗಿ ಬದುಕಿ ಬಾಳಿದವರಲ್ಲದೆ ಹೃದಯ ಶ್ರೀಮಂತಿಕೆಯನ್ನು ಹೊಂದಿದ್ದರು. ಇವರಿಗೆ ಶ್ರೀರಂಗಪಟ್ಟನದ ಹತ್ತಿರ ಇರುವ ಕಳಸವಾಡಿಯಲ್ಲಿ ಒಂದುವರೆ ಎಕರೆ ಗದ್ದೆಯನ್ನು ಹೊಂದಿದ್ದರು. ಇಲ್ಲಿಂದ ಪ್ರತಿ ವರ್ಷ ಒಂದು ಗಾಡಿ ತುಂಬಾ 'ಬಂಗಾರ ಸಣ್ಣ' ಭತ್ತ ನಮ್ಮ ಮನೆಗೆ ಬರುತ್ತಿತ್ತು ಹಾಗೆಯೇ ಕೆ.ಆರ್. ನಗರದ ಹತ್ತಿರವಿರುವ ಚಂದಗಾಲಗದ್ದೆಯಿಂದ ಒಂದು ಗಾಡಿ 'ರತ್ನಚೂಡಿ' ಭತ್ತವು ಮನೆಗೆ ಬರುತ್ತಿತ್ತು. ಇದು ಅವರನ್ನು ಅನ್ನದಾತರಾಗಲು ಪ್ರೇರೇಪಿಸಿತು. ಇವರ ಮನೆ ಆಗಿನ ಕಾಲಕ್ಕೆ ದೊಡ್ಡಮನೆಯೇ ಸರಿ (ಸುಮಾರು 40x40 ಅಡಿಯುಳ್ಳ ಮೂಲೆಯ ಪೂರ್ಣ ಕಟ್ಟಡ– ಇರ್ವಿನ್ ರಸ್ತೆಯ 2ನೇ ಅಡ್ಡರಸ್ತೆ, ಮೈಸೂರು). ಇಲ್ಲಿ ನಮ್ಮ ಮಾವನವರ ಮತ್ತು ನಮ್ಮ ಭಾವನವರ ಮದುವೆಯ ಸಂಭ್ರಮವನ್ನು ಕಂಡಿದ್ದೇನೆ. ಹಾಗೂ ಪ್ರತಿವರ್ಷ 'ಉಪಾಕರ್ಮ'ವನ್ನು ಹತ್ತಿರ ಸಂಬಂಧಿಗಳು ಸೇರಿ ಆಚರಿಸುತ್ತಿದ್ದರು.

ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆ (C.T.I.) ಪ್ರಾರಂಭವಾದಾಗ (1911) ಪ್ರಥಮಬಾರಿಗೆ ಕಂಪನಿಮನೆ ವೆಂಕಟಾಚಾರ್ಯರು ಲೋಹ ವಿಭಾಗದ ಮುಖ್ಯಸ್ಥರಾಗಿ ಕೆಲವೇ ವರ್ಷ ಸೇವೆ ಸಲ್ಲಿಸಿ ಇದ್ದು ನಿಧನರಾದರು, ತದನಂತರ ಅವರ ಮಗನಾದ ಶಿಲ್ಪಿ ಎನ್.ವಿ. ಸೂರ್ಯನಾರಾಯಣಾಚಾರ್ಯರಿಗೆ ಹುದ್ದೆ ದೊರಕಿತು. ಇವರು ಸುಮಾರು ಮೂವತ್ತೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿ ದೇಶಾದ್ಯಂತ ಶಿಲ್ಪಕಲೆಯ ಕೀರ್ತಿಯನ್ನು ತಮ್ಮ ಶಾಲೆಗೆ ತಂದುಕೊಟ್ಟರು. ಇವರ ಮನೆಯೇ ಇನ್ನೊಂದು ಚಿಕ್ಕ ಕಾರ್ಯಗಾರವಾಗಿತ್ತು ಇಲ್ಲಿ ಅನೇಕ ಶಿಷ್ಯರು, ಸಹಾಯಕರು ಕೆಲಸ ಮಾಡುತ್ತಿದ್ದರು. ಇವರುಗಳಿಗೆ ಊಟ ಉಪಚಾರ ವ್ಯವಸ್ಥೆಯನ್ನು ಮಾಡಲಾಗಿತ್ತು ನಮ್ಮವರೇ ಆದ ಬಡವರಿಗೆ ಅಡುಗೆ ಮತ್ತು ಮನೆಯ ಕೆಲಸಗಳನ್ನು ವಹಿಸಿ ಅವರ ಜೀವನೋಪಾಯಕ್ಕೆ ದಾರಿ ಮಾಡಿಕೊಟ್ಟಿದ್ದರು. ಯಾರಾದರೂ ನಮ್ಮವರ ಸಂಕಷ್ಟದಲ್ಲಿದ್ದರೆ ಧನ ಸಹಾಯ ಮಾಡುತ್ತಿದ್ದರು.

ಇವರ ಶಿಲ್ಪಕಲಾ ಕೌಶಲ್ಯವನ್ನು ಗಮನಿಸಿದ್ದ ಮೈಸೂರು ಅಶೋಕ ರಸ್ತೆಯಲ್ಲಿರುವ (ಅರಮನೆ ಮುಂಭಾಗದ ರಸ್ತೆ) **'ತುಳಸಿ ಜ್ಯೂಯಲರಿ ಮಾರ್ಟ್' 'ವೆರೈಟಿ ಜ್ಯೂಯಲರಿ ಮಾರ್ಟ್'** ಇತ್ಯಾದಿ ವತಿಯಿಂದ ಇವರಿಗೆ ಆಗಿಂದಾಗ್ಗೆ ದೇವರಮನೆ ವಿಗ್ರಹಗಳನ್ನು ಬೆಳ್ಳಿಯಲ್ಲಿ ಮಾಡಲು ಆರ್ಡರ್‌ಗಳು ಬರುತ್ತಿದ್ದವು. ಮೈಸೂರಿನ ಅನೇಕ ಆಗಿನ ಶ್ರೀಮಂತರು ಖುದ್ದಾಗಿ ಬಂದು ಬೆಳ್ಳಿಯಲ್ಲಿ ವಿಗ್ರಹಗಳನ್ನು ಮಾಡಿಸುತ್ತಿದ್ದರು.

ಉದಾಹರಣೆಗೆ ಅಂದಿನ ಒಬ್ಬ ಮೈಸೂರಿನ ಶ್ರೀಮಂತರಾದ ಧರ್ಮರತ್ನಾಕರ ನಂದಿ ಬಸಪ್ಪರವರ ಮಗ ದಿ. ಚಂದ್ರಶೇಖರಪ್ಪನವರು (ಪೆಟ್ರೋಲ್ ಬಂಕ್ ಮಾಲಿಕ) ತಮ್ಮ ದೇವರ ಮನೆಗೆ ಬೆಳ್ಳಿಯ ಸುಮಾರು ಒಂದು ಅಡಿ ಎತ್ತರ 'ಗೌರಿಶಂಕರ; ವಿಗ್ರಹವನ್ನು ಮಾಡಿಕೊಟ್ಟಿರುತ್ತಾರೆ (ಚಿತ್ರ 35). ಮೈಸೂರಿನ 'ಪದ್ಮಾ ಥಿಯೇಟರ್' ಮಾಲಿಕರು ತಮ್ಮ ಮನೆಗೆ (ವೈನಾಡು, ಕೇರಳ) ಮಾಡಿಸಿಕೊಂಡ ಬೆಳ್ಳಿಯ ಪಾರ್ಶ್ವನಾಥ ವಿಗ್ರಹ ಸುಮಾರು ಒಂದೂಕಾಲು ಅಡಿ ಎತ್ತರವಿರುತ್ತದೆ. ಇದರ ಸುಂದರ ಶಿಲ್ಪ ಕಲೆಯನ್ನು ಕಂಡು ಅವರ ಹತ್ತಿರದ ನೆಂಟರು, ಅದೇ ಎತ್ತರದ ಬೆಳ್ಳಿಯ ವಿಗ್ರಹವನ್ನು ಮಾಡಿಸಿಕೊಂಡಿರುತ್ತಾರೆ. (ಚಿತ್ರ 36)

ಇವರಲ್ಲಿ ಇದ್ದ ಇನ್ನೊಂದು ಸದ್ಗುಣವೇನೆಂದರೆ ನಿಪುಣ ಶಿಲ್ಪಿಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಈ ಸಾಲಿನಲ್ಲಿ ನಾಗಮಂಗಲದ ಶಿಲ್ಪಿ ಎನ್.ಪಿ. ಶ್ರೀನಿವಾಸಚಾರ್ಯರು ಒಬ್ಬ ಪ್ರಮುಖರು. 1938 ರಲ್ಲಿ ಗರುಡವಾಹನವನ್ನು ಪಂಚಲೋಹದಲ್ಲಿ ನಿರ್ಮಿಸುವ ಕಾರ್ಯವೊಂದು ಸೂರ್ಯನಾರಾಯ ಣಾಚಾರ್ಯರಿಗೆ ಒದಗಿ ಬಂತು. ಕೆಲಸದ ಒತ್ತಡ ವಿಪರೀತ ಇದ್ದರಿಂದ ಇವರ ಜ್ಞಾಪಕಕ್ಕೆ ಬಂದಿದ್ದು ನಾಗಮಂಗಲದ ಯುವಶಿಲ್ಪಿ ಶ್ರೀನಿವಾಸಾಚಾರ್ಯರು. ಆತನನ್ನು ಮೈಸೂರಿಗೆ ಬರಮಾಡಿಕೊಂಡು ಕೆಲಸದ ಜೊತೆಗೆ ವಸತಿ ಸೌಕರ್ಯವನ್ನು ಸಹ ಕಲ್ಪಿಸಿಕೊಟ್ಟರು.




ಶಿಲ್ಪಿ ಎನ್.ಪಿ. ಶ್ರೀನಿವಾಸಚಾರ್ಯರು
(1913–1992)

ಸ್ವಲ್ಪ ಕಾಲ ಕಳೆದ ನಂತರ ಮೈಸೂರಿನಲ್ಲಿ (ಮಂಡಿ ಪೊಲೀಸ್ ಸ್ಟೇಷನ್ ಹಿಂಭಾಗ) ತಮ್ಮದೇ ಆದ ಬಾಡಿಗೆ ಮನೆಯಲ್ಲಿ ಕುಟುಂಬ ಸಮೇತರಾಗಿ ತಮ್ಮ ಶಿಲ್ಪಕಲಾ ಜೀವನವನ್ನು ಮುಂದುವರೆಸಿದರು.


ಮುಂದೆ ಶ್ರೀನಿವಾಸಾಚಾರ್ಯರು ಬೆಂಗಳೂರಿನಲ್ಲಿ ಇರುವ All India Design center ನಲ್ಲಿ Master craftman ಹುದ್ದೆಗೆ ಆಯ್ಕೆಗೊಂಡು ಕೆಲಸ ನಿರ್ವಹಿಸುತ್ತಿದ್ದರು. ಆ ವೇಳೆಯಲ್ಲಿ ಇವರು ನಿರ್ಮಿಸಿದ ಶಿಲ್ಪ 'ಚನ್ನಕೇಶವ' ವಿಗ್ರಹಕ್ಕೆ ಅಂದಿನ ಭಾರತದ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯರವರಿಂದ 1968ರಲ್ಲಿ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇವರ ಇನ್ನೊಂದು ಶಿಲ್ಪಕಲಾಕೃತಿ ದ್ವಿಲೋಹದ ಅರ್ಧನಾರೀಶ್ವರ ವಿಗ್ರಹಕ್ಕೆ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಭಾರತದ 25ನೇ ವರ್ಷದ ಸ್ವಾತಂತ್ರ್ಯ ದಿನೋತ್ಸವದಂದು ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಶಿಲ್ಪಿ ಸೂರ್ಯನಾರಾಯಣಚಾರ್ ಅವರ ಅನೇಕ ಶಿಷ್ಯರು ಶಿಲ್ಪಕಲೆಯಲ್ಲಿ ಪರಿಣಿತರಾಗಿ ತಮ್ಮ ಜೀವನೋಪಾಯಕ್ಕೆ ದಾರಿ ಮಾಡಿಕೊಂಡರು. ಇವರಲ್ಲಿ ಇಬ್ಬರು ಪ್ರಮುಖರಾದವರು ಎನ್. ಎಸ್. ವೆಂಕಟಾಚಾರ್ ಮತ್ತು ಎನ್. ಜಿ. ನೀಲಕಂಠಾಚಾರ್ ಇವರಿಬ್ಬರಿಗೂ ತಮ್ಮ ಮನೆಯಲ್ಲಿಯೇ ಆಶ್ರಯ ನೀಡಿ ಶಿಲ್ಪಾಭ್ಯಾಸದ ಜೊತೆಗೆ ಊಟ ಉಪಚಾರದ ವ್ಯವಸ್ಥೆಯನ್ನು ಮಾಡಿದ್ದರು. ವೆಂಕಟಾಚಾರ್ಯರು ಜೊತೆಗೆ ಓದಿಕೊಂಡು ಡಿಪ್ಲೊಮಾ ಪದವಿಧರರಾಗಿದ್ದು ಸರ್ಕಾರಿ ಪಾಲಿಟೆಕ್ನಿಕ್ನಲ್ಲಿ ಕೆಲಸ ನಿರ್ವಹಿಸಿ, ನಿವೃತ್ತಿಯ ನಂತರ ಹಾಸನದಲ್ಲಿ 'ಶಿಲ್ಪ ಕುಟೀರ' ಸ್ಥಾಪಿಸಿ ಆಸಕ್ತ ವಿದ್ಯಾರ್ಥಿಗಳಿಗೆ ಶಿಲ್ಪಕಲೆಯನ್ನು ಕಲಿಸಿದ್ದಾರೆ. 2 1/2 ಅಡಿ ಎತ್ತರದ ವಿಗ್ರಹಕ್ಕೆ ಭಾರತ ಸರ್ಕಾರದ ಅರ್ಹತಾ ಪ್ರಶಸ್ತಿ ದೊರಕಿದೆ.



ಶಿಲ್ಪಿ ಎನ್. ಎಸ್. ವೆಂಕಟಾಚಾರ್
(1920–1989)

ಸೂರ್ಯನಾರಾಯಣ ಆಚಾರ್ಯರ ಮಾರ್ಗದರ್ಶನದಲ್ಲಿ ಶಿಲ್ಪಕಲೆಯನ್ನು ಮುಂದುವರೆಸಿದ ನಾಗಮಂಗಲದ ಶಿಲ್ಪಿ ಎನ್.ಜಿ. ನೀಲಕಂಠಾಚಾರ್ಯರೂ ಸಹ ಅನೇಕ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ಕನಾಟಕ ರಾಜ್ಯದ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರೂ ಆಗಿ ಕಾರ್ಯನಿರ್ವಹಿಸಿದ್ದಾರೆ.



ಶಿಲ್ಪಿ ಎನ್. ಜಿ. ನೀಲಕಂಠಾಚಾರ್
(1924–2013)

ಸೂರ್ಯನಾರಾಯಣ ಆಚಾರ್ಯರ ಒಡನಾಟದಲ್ಲಿದ್ದ ಹೆಸರಾಂತ ಶಿಲ್ಪಿಗಳೆಂದರೆ, ಸ್ವರ್ಣಕಲಾ ನಿಪುಣ ಸಿಂಗಣ್ಣಾಚಾರ್ಯರು, ಇವರ ಮಗ **'ಪದ್ಮಶ್ರೀ'** ಪ್ರಶಸ್ತಿ ಪುರಸ್ಕೃತ ಎಸ್. ಎನ್. ಸ್ವಾಮಿ, ಎಸ್. ನಂಜುಂಡಪ್ಪನವರು, ರಾಷ್ಟ್ರಪ್ರಶಸ್ತಿ ವಿಜೇತ ಎಸ್. ನರಸಿಂಹಾಚಾರ್ಯರು ಇವರುಗಳೊಡನೆ ಕಾಲ ಕಳೆಯುವುದರಲ್ಲಿ ಸೂರ್ಯನಾರಾಯಣಾಚಾರ್ಯರು ಸಂತೋಷಪಡುತ್ತಿದ್ದರು. ಇವರು ಶ್ರೀ ಕಾಳಿಕಾಂಬ ಕಮಠೇಶ್ವರಿ ದೇವಸ್ಥಾನ, ಕೆ.ಟಿ. ಸ್ಟ್ರೀಟ್ ಮೈಸೂರು ಇಲ್ಲಿನ ಕಮಿಟಿಯ ಮೆಂಬರ್ ಆಗಿ ಸೇವೆ ಸಲ್ಲಿಸಿರುತ್ತಾರೆ. ಇವರ ಹೆಸರಿನಲ್ಲಿ ಪ್ರತಿವರ್ಷ ಕಾರ್ತೀಕಮಾಸದ **'ಶಿವದೀಪೋತ್ಸವ'**ವನ್ನು ಆಚರಿಸಿ ಪ್ರಸಾದ ವಿನಿಯೋಗ ಮಾಡಲಾಗುತ್ತಿದೆ ಇದನ್ನು ನಾನು (ಲೇಖಕ) 38 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುತ್ತೇನೆ.

ಶಿಲ್ಪ ಕಾರ್ಯದಲ್ಲಿ ನಿರತರಾಗಿರುವ ಸಂದರ್ಭದಲ್ಲಿ ಸ್ನೇಹಿತರು / ಗ್ರಾಹಕರು ಬಂದಾಗ ತಮ್ಮ ಶಿಲ್ಪ ಕೆಲಸವನ್ನು ಮುಂದುವರೆಸಿಕೊಂಡೇ ಮಾತುಕತೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದುದು ವಿಶೇಷ. ಇವರು ಶ್ರೀ ಕಾಳಿಕಾಂಬ ಕಮಠೇಶ್ವರಿ ದೇವಸ್ಥಾಸನಕ್ಕೆ ಪಂಚಲೋಹದ ಶ್ರೀ ಸೂರ್ಯನಾರಾಯಣ ಉತ್ಸವಮೂರ್ತಿ ಮಾಡಿಕೊಟ್ಟಿರುತ್ತಾರೆ. (ಚಿತ್ರ 37) 11–06–1965ರಲ್ಲಿ ತಮ್ಮ ಮನೆಯ ಹತ್ತಿರವಿರುವ ಶ್ರೀರಾಮಲಿಂಗ ಚೌಡೇಶ್ವರಿ ದೇವಸ್ಥಾನಕ್ಕೆ ಮಾಡಿಕೊಟ್ಟಿರುವ ಬೆಳ್ಳಿಯ ಬಾಗಿಲವಾಡ, ಬೆಳ್ಳಿಯ ಬಾಗಿಲು, ಪ್ರಭಾವಳಿ (4 ಅಡಿ ಎತ್ತರ) ಇವುಗಳಲ್ಲಿ ಕಂಡು ಬರುವ ಸೂಕ್ಷ್ಮ ಕಲಾತ್ಮಕವಾದ ಉಬ್ಬು ಶಿಲ್ಪದ ನಕಾಶೆ ಕೆಲಸವನ್ನು ಗಮನಿಸಬಹುದು ಹಾಗೆಯೇ ಮೈಸೂರು ಅರಮನೆಯ ಶ್ರೀ ಕೋಟೆ ಗಣಪತಿ ದೇವಸ್ಥಾನಕ್ಕೆ (ಚಿತ್ರ 38 ರಿಂದ 42) ಮಾಡಿಕೊಟ್ಟಿರುವ ಬೆಳ್ಳಿಯ ಬಾಗಿಲವಾಡ ಮತ್ತು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನಲ್ಲಿರುವ ಶ್ರೀ ನಾರಾಯಣಸ್ವಾಮಿ ಗುಡಿಯಲ್ಲಿರುವ ಬೆಳ್ಳಿಯ ದಶಾವತಾರ ಬಾಗಿಲವಾಡ. ಇಲ್ಲಿ ಉಬ್ಬು ಶಿಲ್ಪದಲ್ಲಿರುವ ದಶಾವತಾರಗಳ ಬಾವ ಭಂಗಿಗಳು ಮತ್ತು ಅದರ ಸೂಕ್ಷ್ಮ ನಕಾಶೆ ಕೆಲಸದ ನೈಪುಣ್ಯತೆ ಗಮನಾರ್ಹ.

ಇವರು **7–12–1980** ರಂದು ತಮ್ಮ ಸ್ವಗೃಹದಲ್ಲಿ ಸುಮಾರು ಬೆಳಿಗ್ಗೆ 10 ಘಂಟೆಯ ಸಮಯದಲ್ಲಿ ವಿಧಿವಶರಾದರು. ಅಂದಿನ ಸೂಪರಿಯಿಂಡೆಂಟ್ ಶ್ರೀ ಹೆಚ್. ಎಸ್. ಕೇಶವಮೂರ್ತಿ ಮತ್ತು ಅಧಿಕಾರಿ ವರ್ಗದವರು ಹಾಗೂ ಮೈಸೂರಿನ ಅಶೋಕ ರಸ್ತೆಯಲ್ಲಿರುವ ತುಳಸಿ ಜ್ಯೂಯಲರಿ ಮಾರ್ಟ್, [illegible] ಮಾರ್ಟ್ ಇತ್ಯಾದಿ ಮಾಲೀಕರು ಬಂದು ತಮ್ಮ ಅಂತಿಮ ದರ್ಶನ ಪಡೆದರು.



4. ಶಿಲ್ಪಿ ಎನ್.ವಿ. ವಿಶ್ವರೂಪಾಚಾರ್
(1902 –1987)

ಶಿಲ್ಪಿ ಎನ್.ವಿ. ವಿಶ್ವರೂಪಾಚಾರ್ಯರು ಕಂಪನಿ ಮನೆಯ ಕಡೆಯ ಪುತ್ರರು. ಇವರೂ ಸಹ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್‌ನಲ್ಲಿ ಮೆಟಲ್ ಇನ್‌ಸ್ಟ್ರಕ್ಟರ್ ಆಗಿ ಕಾರ್ಯನಿರ್ವಹಿಸಿದ ಕಂಪನಿ ಮನೆಯ ನಾಲ್ಕನೆಯ ವ್ಯಕ್ತಿ ಹಾಗೂ ಕಡೆಯವರು, ಮೊದಲಿಗೆ ವಿಶ್ವರೂಪಾಚಾರ್ಯರು, ಸಹೋದರ ಸೂರ್ಯನಾರಾಯಣಾಚಾರ್ಯರ ಸಹಾಯಕರಾಗಿ ಇನ್ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅದೇ ವೇಳೆಯಲ್ಲಿ ನಮ್ಮ ದೇಶದ **ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದ್** ಇವರು ಇನ್ಸ್‌ಟಿಟ್ಯೂಟ್‌ಗೆ ಭೇಟಿ ನೀಡಿದಾಗ ಸಹಾಯಕ ವಿಶ್ವರೂಪಾಚಾರ್ಯರು ನಿರ್ಮಿಸಿದ್ದ **ಶುಕನಾಸಿನಿ** ಮತ್ತು **ದರ್ಪಣ ಸುಂದರಿಯರ** ವಿಗ್ರಹಗಳನ್ನು ನೋಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದರು. (ಚಿತ್ರ 43)

ಮುಂದೆ ವಿಶ್ವರೂಪಾಚಾರ್ಯರು ಸಹಾಯಕ ಹುದ್ದೆಯಿಂದ ಮೆಟಲ್ ಇನ್ಸ್‌ಟ್ರಕ್ಟರ್ ಹುದ್ದೆಗೆ (ಸೂರ್ಯನಾರಾಯಣಾಚಾರ್ಯರ ನಿವೃತ್ತಿಯ ನಂತರ) ನಿಯೋಜಿತರಾದರು. ಇವರೂ ಸಹ ಹಲವಾರು ಶಿಲ್ಪ ಕಲಾಕೃತಿಗಳನ್ನು ನಿರ್ಮಿಸಿದ್ದಾರೆ. 1960 ರ ಸುಮಾರಿಗೆ ಕರ್ನಾಟಕ ಸರ್ಕಾರ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ ಕಂಚಿನ ಶಿಲ್ಪ ನಿರ್ಮಾಣ ಮಾಡುವ ಕೆಲಸವನ್ನು ವಿಶ್ವರೂಪಾಚಾರ್ಯರಿಗೆ ವಹಿಸಲಾಯಿತು. ಅದರಂತೆ ನಿರ್ಮಾಣ ಮಾಡಿದ ಕಂಚಿನ ಪೂರ್ಣ ಪ್ರಮಾಣದ ಕೆಂಪೇಗೌಡರ ಪುತ್ಥಳಿಯೇ ಬೆಂಗಳೂರು ಕಾರ್ಪೋರೇಷನ್ ಕಛೇರಿಯ ಮುಂಭಾಗದ ವೃತ್ತದಲ್ಲಿ ಪ್ರಪ್ರಥಮ ಬಾರಿಗೆ ಬೆಂಗಳೂರಿನಲ್ಲಿ 1964ರಲ್ಲಿ ಸ್ಥಾಪಿಸಿರುವುದು. (ಚಿತ್ರ 44)



ಶ್ರೀ ಕೆಂಪೇಗೌಡರ ಕಂಚಿನ ವಿಗ್ರಹ (ಸುಮಾರು ೭ ೧/೨) ಮುಗಿದ ಮೇಲೆ ಸೂಪರಿಂಟೆಂಡೆಂಟ್ ಶ್ರೀ ಆರ್. ರಾಜಣ್ಣ (ಸೂಟು ಧರಿಸಿರುವವರು) ಮತ್ತು ಶಿಲ್ಪಿ ಎನ್.ವಿ. ವಿಶ್ವರೂಪಾಚಾರ್ಯ (ಜುಬ್ಬ ಪಂಚೆ ಧರಿಸಿರುವವರು) ಹಾಗೂ ಇತರ ಕೆಲಸಗಾರರು.



ಚಿತ್ರ ೧: ಕಂಪನಿಮನೆ ಶಿಲ್ಪಿ ವೆಂಕಟಾಚಾರ್ಯರಿಗೆ ದೊರಕಿದ ಮೆಡಲ್. ಲಂಡನ್ನಿನ ಕಲೋನಿಯಲ್ ಎಕ್ಸಿಬಿಷನ್ ಸಂಸ್ಥೆಯ ಕಾರ್ಯನಿರ್ವಾಹಕ ಅಧ್ಯಕ್ಷರಾದ ಆಲ್ಬರ್ಟ್ ಎಡ್ವರ್ಡ್ (ಪ್ರಿನ್ಸ್ ಆಫ್ ವೇಲ್ಸ್) ಪ್ರದಾನ.(೧೮೮೬)



ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್ (C.T.I.) ಸಯ್ಯಾಜಿರಾವ್ ರಸ್ತೆ, ಮೈಸೂರು



ಚಿತ್ರ ೨: C.T.I. ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಂಪನಿಮನೆ ಶಿಲ್ಪಿಗಳು
೧. ಎನ್.ವಿ. ಶ್ಯಾಮಾಚಾರ್, ೨. ಶಿಲ್ಪಿ ಎನ್.ವಿ. ಚಿನ್ನಾಚಾರ್, ೩. ಎನ್.ವಿ. ನೀಲಾಚಾರ್,
೪. ಶಿಲ್ಪಿ ಎನ್.ವಿ. ಸೂರ್ಯನಾರಾಯಣಚಾರ್, ೫. ಎನ್.ವಿ. ಶ್ರೀನಿವಾಸಾಚಾರ್
೬. ಶಿಲ್ಪಿ ಎನ್.ವಿ. ವಿಶ್ವರೂಪಾಚಾರ್



ಚಿತ್ರ ೩: ನಾಟ್ಯ ಬಾಲಕೃಷ್ಣ – ಕಂಪನಿಮನೆ ಶಿಲ್ಪಿ ವೆಂಕಟಾಚಾರ್ಯರ ಕೃತಿ



ಚಿತ್ರ ೪: ಹಿತ್ತಾಳೆಯ ಮಂದಹಾಸನ – ಕಂಪನಿಮನೆ ಶಿಲ್ಪಿ ವೆಂಕಟಾಚಾರ್ಯರ ಕೃತಿ



ಚಿತ್ರ ೫೫: ಆಕಾಶವಾಣಿ ಕೇಂದ್ರದಲ್ಲಿ ಇಟ್ಟಿರುವ ಪಂಚಲೋಹದ ನಟರಾಜ ಮತ್ತು ನಾಟ್ಯಸರಸ್ವತಿ

ಚಿತ್ರ ಕೃಪೆ: ಆಕಾಶವಾಣಿ ಕೇಂದ್ರ, ಬೆಂಗಳೂರು



ಚಿತ್ರ ೬: ನಟರಾಜ

ಚಿತ್ರ ಕೃಪೆ: ಆಕಾಶವಾಣಿ ಕೇಂದ್ರ, ಬೆಂಗಳೂರು



ಚಿತ್ರ ೭: ನಾಟ್ಯ ಸರಸ್ವತಿ

ಚಿತ್ರ ಕೃಪೆ: ಆಕಾಶವಾಣಿ ಕೇಂದ್ರ, ಬೆಂಗಳೂರು



ಚಿತ್ರ ೮: 'ಶಾಸ್ತ್ರಿ ಹಾಲ್'

ಕೃಪೆ: ರಿಜಿಸ್ಟ್ರಾರ್, ಅಣ್ಣಾಮಲೈ ಯೂನಿವರ್ಸಿಟಿ, ಚಿದಂಬರಂ, ತಮಿಳುನಾಡು



ಚಿತ್ರ ៩: ನಟರಾಜ ವಿಗ್ರಹ (೩ ಅಡಿ ಎತ್ತರ)



ಚಿತ್ರ ೧೦: ಗೋವಿಂದರಾಜ ವಿಗ್ರಹ (೪ ಅಡಿ ಎತ್ತರ, ೫ ಅಡಿ ಅಗಲ)



ಚಿತ್ರ ೧೧: ಶಾಂತಲಾ (ಕೆ.ವಿ. ಅಯ್ಯರ್ ಅವರ 'ಶಾಂತಲಾ' ಕಾದಂಬರಿಯ ಮುಖಪುಟ ಚಿತ್ರ)



ಚಿತ್ರ ೧೨: ಬೇಲೂರು ಶ್ರೀ ಚನ್ನಕೇಶವ ದೇವಾಲಯದ ಕಚೇರಿಯಲ್ಲಿ ೧೯೩೮ರಲ್ಲಿ ಸ್ಥಾಪಿತವಾಗಿರುವ ೨.೫ ಅಡಿ ಎತ್ತರದ ನಾಲ್ವಡಿ ಕೃಷ್ಣರಾಜ ಒಡೆಯರ ಕಂಚಿನ ಪ್ರತಿಮೆ.



ಚಿತ್ರ ೧೩: ಮೈಸೂರು ದಸರಾ ವಸ್ತುಪ್ರದರ್ಶನಾಲಯದಲ್ಲಿ (೧೯೫೭) ಪ್ರದರ್ಶಿಸಲಾದ ಶ್ರೀ ಗಣೇಶ ಮೂರ್ತಿ ಮತ್ತು ಅದಕ್ಕೆ ದೊರೆತ ಪದಕ.



ಚಿತ್ರ ೧೪: ಗಣೇಶಮೂರ್ತಿ (ಆಲ್ ಇಂಡಿಯಾ ಹ್ಯಾಂಡಿಕ್ರಾಪ್ಟ್ ಬೋರ್ಡ್ – ಡಿಸೈನ್ ಸೆಂಟರ್, ಬೆಂಗಳೂರು, ಭಾರತ ಸರ್ಕಾರ) **೧೯೫೭**




ಚಿತ್ರ ೧೫: ಎಡದಿಂದ ನಾಲ್ಕನೆಯವರು ಶಿಲ್ಪಿ ಎನ್.ವಿ. ಚಿನ್ನಾಚಾರ್ಯ, ನಂತರ ಕ್ರಮವಾಗಿ ಖ್ಯಾತ ಕಲಾವಿದೆ ವಿಮಲಾ ರಂಗಾಚಾರ್, ರಾಜ್ಯಪಾಲ ಧರ್ಮವೀರ ಮತ್ತು ಇತರ ಪ್ರಶಸ್ತಿಗಳನ್ನು ಪಡೆದ ಕಲಾವಿದರು.





ಚಿತ್ರ ೧೭



ಚಿತ್ರ ೧೭: ಆಂಧ್ರಪ್ರದೇಶದ 'ವಿಶ್ವಶಿಲ್ಪಿ'(೨೬-೧೧-೧೯೭೦) ಮಾಸಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾದ ಶಿಲ್ಪಕಲಾನಿಧಿ ಎನ್.ವಿ. ಚಿನ್ನಾಚಾರ್ಯರ ಚಿತ್ರ.



ಚಿತ್ರ ೧೮: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರು ಕಾರ್ಯನಿರತರಾಗಿರುವುದು. ಪಕ್ಕದಲ್ಲಿ ಶ್ರೀ ಸುಬ್ರಹ್ಮಣ್ಯ ಮೂರ್ತಿ ಪ್ರತಿಮೆ.



ಚಿತ್ರ ೧೯: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕೃತಿ – ದರ್ಪಣ ಸುಂದರಿ



ಚಿತ್ರ ೨೦: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕೃತಿ – ನಾಟ್ಯ ಗಣಪತಿ



ಚಿತ್ರ ೨೧: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕೃತಿ – ಬಾಲತಾಂಡವ ಕೃಷ್ಣ




ಚಿತ್ರ ೨೨: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕೃತಿ – ದುರ್ಗಾ ಲಕ್ಷ್ಮಿ



ಚಿತ್ರ ೨೩: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕೃತಿ – ನೃತ್ಯರಾದ ಮಕರ ಪಕ್ಷಿವಾಹನ



ಚಿತ್ರ ೨೪: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕೃತಿ – ಕೋದಂಡ ಶಿವಮೂರ್ತಿ



ಚಿತ್ರ ೨೫: ಶಿಲ್ಪಿ ಎನ್.ವಿ. ಚಿನ್ನಾಚಾರ್ಯರ ಕೃತಿಗಳೊಂದಿಗೆ,
ಲೇಖಕರ ತಮ್ಮ ದಿ. ಶಿಲ್ಪಿ ಆದಿತ್ಯ ಮತ್ತು ಲೇಖಕರು



ಚಿತ್ರ ೨೩: ಗೌತಮ ಬುದ್ಧ



ಚಿತ್ರ ೨೭: ಶ್ರೀನಿವಾಸ



ಚಿತ್ರ ೨೮: ಕಡೆಗೋಲು ಕೃಷ್ಣ



ಚಿತ್ರ ೨೯: ನಟರಾಜ



ಚಿತ್ರ ೩೦: ನಟರಾಜ



ಚಿತ್ರ ೩೧: ವಿಷ್ಣು ಮೋಹಿನಿ



ಚಿತ್ರ ೩.೨: ಸರಸ್ವತಿ ವೀಣಾಪಾಣಿ



ಚಿತ್ರ ೩೩: ತ್ರಿಪುರ ಸುಂದರಿ ತ್ರಿಶಕ್ತಿ



ಚಿತ್ರ ೩೪: ರಾಜರಾಜೇಶ್ವರಿ



ಚಿತ್ರ ೩೫: ಬೆಳ್ಳಿಯ ಗೌರಿಶಂಕರ ವಿಗ್ರಹ




ಚಿತ್ರ ೩೩: ಬೆಳ್ಳಿಯ ಪಾರ್ಶ್ವನಾಥ ವಿಗ್ರಹ



ಚಿತ್ರ ೩.೭: ಶಿಲ್ಪಿ ಎನ್.ವಿ. ಸೂರ್ಯನಾರಾಯಣಚಾರ್ ಅವರ ಸೂರ್ಯನಾರಾಯಣ ಉತ್ಸವಮೂರ್ತಿ.
ಕೃಪೆ: ಅಧ್ಯಕ್ಷರು, ಶ್ರೀ ಕಾಳಿಕಾಂಬ ಕಮಠೇಶ್ವರಿ ದೇವಸ್ಥಾನ, ಕೆ.ಟಿ. ಸ್ಟ್ರೀಟ್, ಮೈಸೂರು




ಚಿತ್ರ ೩೮: ಶ್ರೀ ಚೌಡೇಶ್ವರಿ ದೇವಸ್ಥಾನದ ಬೆಳ್ಳಿಯ ಬಾಗಿಲುವಾಡ
ಕೃಪೆ: ಅಧ್ಯಕ್ಷರು, ಶ್ರೀ ಚೌಡೇಶ್ವರಿ ದೇವಸ್ಥಾನ, ಕೆ.ಟಿ. ಸ್ಟ್ರೀಟ್, ಮೈಸೂರು



ಚಿತ್ರ ೩೯: ಶ್ರೀ ಚೌಡೇಶ್ವರಿ ದೇವಸ್ಥಾನದ ಬೆಳ್ಳಿಯ ಬಾಗಿಲುವಾಡ ಮತ್ತು ಬಾಗಿಲು
ಕೃಪೆ: ಅಧ್ಯಕ್ಷರು, ಶ್ರೀ ಚೌಡೇಶ್ವರಿ ದೇವಸ್ಥಾನ, ಕೆ.ಟಿ. ಸ್ಟ್ರೀಟ್, ಮೈಸೂರು



ಚಿತ್ರ ೪೦: ಶ್ರೀ ಚೌಡೇಶ್ವರಿ ದೇವಸ್ಥಾನದ ಬೆಳ್ಳಿಯ ಪ್ರಭಾವಳಿ
ಕೃಪೆ: ಅಧ್ಯಕ್ಷರು, ಶ್ರೀ ಚೌಡೇಶ್ವರಿ ದೇವಸ್ಥಾನ, ಕೆ.ಟಿ. ಸ್ಟ್ರೀಟ್, ಮೈಸೂರು



ಚಿತ್ರ ೪೧: ಶ್ರೀ ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು
ನಾರಾಯಣಸ್ವಾಮಿ ಗುಡಿಯ ಅಲಂಕರಿಸಿರುವ ಬೆಳ್ಳಿಯ ದಶಾವತಾರ ಬಾಗಿಲವಾಡ



ಚಿತ್ರ ೪೨: ಶ್ರೀಗಣಹೋಮಕ್ಕೆ ಉಪಯೋಗಿಸಬಹುದಾದ ಹಿತ್ತಾಳೆ ತಗಡಿನ ಗಣೇಶಮೂರ್ತಿ ಕೃತಿ (೮.೫ ಇಂಚು). ಇದರ ನಕಾಶೆ ಕೆಲಸ ಮತ್ತು ಗಣಪನ ವಾಹನಗಳು ಗಮನಾರ್ಹ.



ಚಿತ್ರ ೪೩: ಶಿಲ್ಪಿ ಎನ್.ವಿ. ವಿಶ್ವರೂಪಾಚಾರ್ಯರು ತಾವು ನಿರ್ಮಿಸಿರುವ ಶುಕನಾಸಿನಿ ಮತ್ತು ದರ್ಪಣ ಸುಂದರಿ ವಿಗ್ರಹಗಳೊಂದಿಗೆ



ಚಿತ್ರ ೪೪: ಶ್ರೀ ಕೆಂಪೇಗೌಡರು ಅಮೃತಶಿಲೆಯ ಪೀಠದ ಮೇಲೆ ನಿಂತಿರುವ ಶಿಲ್ಪಕೃತಿ. ಪೀಠದ ಮೇಲೆ ಕೆತ್ತಿರುವ ವಿವರಗಳು:

ದಿನಾಂಕ ೦೧-೧೧-೧೯೬೪ ರಂದು ಮದರಾಸಿನ ರಾಜ್ಯಪಾಲರಾದ ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು ಮೈಸೂರಿನ
ರಾಜ್ಯಪಾಲರಾದ ಜನರಲ್ ಎಸ್.ಎಂ. ಶ್ರೀ ನಾಗೇಶ್ ಅವರ ಅಧ್ಯಕ್ಷತೆಯಲ್ಲಿ
ಕೆಂಪೇಗೌಡರವರ ಪ್ರತಿಮೆಯನ್ನು ಅನಾವರಣಗೊಳಿಸಿದರು.

ಜಿ. ನಾರಾಯಣ, ಮೇಯರ್

ನಿರ್ಮಾತೃ ಶಿಲ್ಪಿ ಎನ್.ವಿ. ವಿಶ್ವರೂಪಾಚಾರ್ಯರನ್ನು ಸನ್ಮಾನಿಸಿದರು



ಶ್ರೀ ಕೆಂಪೇಗೌಡರ ಕಂಚಿನ ಮೂರ್ತಿಯ ಹತ್ತಿರದ ದೃಶ್ಯ

ಆಧಾರಗಳು

ದಿ॥ ಪಿ.ಆರ್. ತಿಪ್ಪೇಸ್ವಾಮಿಯವರ ಲೇಖನಗಳು

1) ಜನಪ್ರಗತಿ (ದಿನ ಪತ್ರಿಕೆ) ದಿ: 8.9.1957 (ಪುಟ 2–14)

2) ಕರ್ಮವೀರ (ಮಾಸಿಕ) ದಿ: 28.9.1969 (ಪುಟ 19)

3) ಪ್ರಜಾವಾಣಿ (ದಿನ ಪತ್ರಿಕೆ) ದಿ: 21.3.1976

4) ಕಸ್ತೂರಿ (ಮಾಸಿಕ) ಜನವರಿ 1980 (ಪುಟ 19)

5) ಶಿಲ್ಪ ಸಂಕುಲ ಕರ್ನಾಟಕ ಶಿಲ್ಪಕಲಾ ಅಕಾಡೆಮಿ – 1996 (ಪುಟ 43 ರಿಂದ 48)

6) Diamond Jubilee, 1970, Chamarajendra Technical Institute, Mysore

7) ಮೈಸೂರು ದರ್ಶನ – ಸಂಪುಟ 3, ಶಿಲ್ಪಕಲೆ (ಪುಟ 207)
ಹ.ಕ. ರಾಜೇಗೌಡ ಪ್ರಸಾರಾಂಗ – ಕರ್ನಾಟಕ ವಿಶ್ವವಿದ್ಯಾನಿಲಯ, ಮೈಸೂರು

8) ಜ್ಞಾನ ಗಂಗೋತ್ರಿ – ಕಿರಿಯರ ವಿಶ್ವಕೋಶ, ಪುಸ್ತಕ 5, ಕಲೆ ಸಾಹಿತ್ಯ (ಪುಟ 456)
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು – 1973

9) National Award for Master Craftsmen, New Delhi
ಎನ್.ಜಿ. ನೀಲಕಂಠಾಚಾರ್ (ಪುಟ 8) 1978

10) ಎನ್.ಜಿ. ನೀಲಕಂಠಾಚಾರ್ ಕರ್ನಾಟಕ ಶಿಲ್ಪಕಲಾ ಅಕಾಡೆಮಿ (ಪುಟ 8)

11) ಶಿಲ್ಪಕಲಾರತ್ನ ಎನ್.ಎಸ್. ವೆಂಕಟಾಚಾರ್ಯ 'ಬದುಕು–ಸಾಧನೆ'
ಪ್ರೊ. ಎನ್.ವಿ. ಅಂಬಾಮಣಿಮೂರ್ತಿ (ಪುಟ 30) 2011

12) ಎನ್.ಪಿ. ಶ್ರೀನಿವಾಸಾಚಾರ್ಯ, ಕವಿತಾ ಡಿ.ಕೆ., ಕರ್ನಾಟಕ ಶಿಲ್ಪಕಲಾ ಅಕಾಡೆಮಿ
(ಪುಟ 26 ಮತ್ತು 66) 2017

13) Hindu Gods and Goddesses -by Swami Harshananda -1981



ಶ್ರೀಯುತ ಪ್ರಭಾಕರ್ ಅವರು ಶಿಲ್ಪಕಲಾವಿದರ ವಂಶದವರು. 1963ರಲ್ಲಿ ಭೂಗೋಳ ಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಬೆಂಗಳೂರಿನ ಹೆಬ್ಬಾಳದಲ್ಲಿರುವ ಕೇಂದ್ರ ಸರ್ಕಾರದ ಎನ್‌ಬಿಎಸ್‌ಎಸ್ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಿದರು. 1976ರಲ್ಲಿ ಕೇಂದ್ರ ಸರ್ಕಾರವು ಆರಂಭಿಸಿದ ಅಗ್ರಿಕಲ್ಚರ್ ರೀಸರ್ಚ್ ಸರ್ವೀಸ್ (ಎಆರ್‌ಎಸ್) ಶ್ರೇಣಿಗೆ ಆಯ್ಕೆಯಾಗಿ, ಆ ಸ್ಥಾನವನ್ನು ಅಲಂಕರಿಸಿದ ಮೊದಲ ಕನ್ನಡಿಗರು ಎನಿಸಿದರು. ಸ್ವತಹಾ ಚಿತ್ರಕಾರರೂ ಆಗಿರುವ ಶ್ರೀಯುತರು 1999ರಲ್ಲಿ ಪ್ರಧಾನ ವಿಜ್ಞಾನಿಯಾಗಿ ಸೇವೆಯಿಂದ ನಿವೃತ್ತರಾಗಿದ್ದಾರೆ. ಶಿಲ್ಪಗಳನ್ನು ನೋಡಿ, ಅವುಗಳ ಬಗ್ಗೆ ಕೂಲಂಕಷವಾಗಿ ವ್ಯಾಖ್ಯಾನಿಸುವ ಇವರ ಉತ್ಸಾಹಕ್ಕೆ ಇನ್ನೂ ಯೌವನದ ಹುರುಪು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ISBN : 978-819429041-4

Vidyaranya BS - 94482 35553